ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೫೭

# ಪಟ್ಟಿ – ೨೭

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೩೦ನೇ ಜುಲೈ, ೨೦೧೪**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

03398-1

## ಉದ್ಯೋಗ ಮೇಳ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೭೦೩ (೨೧೩೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕಳೆದ ಒಂದು ವರ್ಷದಲ್ಲಿ ಎಷ್ಟು ಉದ್ಯೋಗ ಮೇಳಗಳನ್ನು ನಡೆಸಲಾಗಿದೆ;

(ಆ) ಈ ಜಿಲ್ಲೆಗಳಲ್ಲಿ ಇರುವ ನಿರುದ್ಯೋಗಿ ಪದವೀಧರರ ಸಂಖ್ಯೆ ಎಷ್ಟು;

(ಇ) ಎಷ್ಟು ಪದವೀಧರರು ಉದ್ಯೋಗ ಕೋರಿ ಅರ್ಜಿ ಸಲ್ಲಿಸಿರುತ್ತಾರೆ;

(ಈ) ಎಷ್ಟು ಪದವೀಧರರನ್ನು ಉದ್ಯೋಗ ಮೇಳದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ?

## ಕೊಳವೆ ಬಾವಿಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೭೦೩(ಎ) (೨೧೩೬) ಮಾನ್ಯ, ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ;

(ಆ) ಇದಕ್ಕಾಗಿ ಮಾಡಲಾದ ವೆಚ್ಚವೆಷ್ಟು?

## ತಾಂತ್ರಿಕ ಸಿಬ್ಬಂದಿ ವೃತ್ತಿ ಕೌಶಲ್ಯ ಹೊರತುಪಡಿಸಿ ಬೇರೆ ವೃತ್ತಿ ತರಬೇತಿ ನೀಡುತ್ತಿರುವುದು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೭೦೪ (೨೧೩೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) T O ಮತ್ತು J T O ಗಳು ನಿರ್ದಿಷ್ಟವಾದ ವೃತ್ತಿಗಳಿಗೆ ನೇಮಕಗೊಂಡು, ಸರ್ಕಾರದ ವೆಚ್ಚದಲ್ಲಿಯೇ ಅದೇ ವೃತ್ತಿಯಲ್ಲಿ CTI/ATI ತರಬೇತಿ ಪಡೆದು ನಂತರ ಅಧಿಕಾರಿಗಳ ವೈಯಕ್ತಿಕ ಹಿತಾಸಕ್ತಿಯಿಂದಾಗಿ ವರ್ಗಾವಣೆ/ನಿಯೋಜನೆ ಮೇರೆಗೆ ತಮ್ಮ ಅನುಕೂಲಕ್ಕನುಗುಣವಾದ I.T.I.ಗಳಲ್ಲಿ ತಾವು ನೇಮಕಗೊಂಡ ಮಾತೃವೃತ್ತಿ ಇಲ್ಲದಿದ್ದರೂ ಬೇರೆ ಬೇರೆ ವೃತ್ತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ತರಬೇತಿದಾರರಿಗೆ ನಿರ್ದಿಷ್ಟವಾದ ವೃತ್ತಿ ಕೌಶಲ್ಯ ಒದಗಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕಿದೆಯೇ; ಹಾಗಿದ್ದಲ್ಲಿ, ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ T O ಮತ್ತು J T O ಗಳ ನೇಮಕಗೊಂಡ ಮಾತೃವೃತ್ತಿ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವೃತ್ತಿ ಮತ್ತು ಕಾರ್ಯಸ್ವರೂಪದ ಬಗ್ಗೆ I.T.I.ವಾರು ವಿವರಗಳನ್ನು ಒದಗಿಸುವುದು;

(ಆ) ತಾಂತ್ರಿಕ ಸಿಬ್ಬಂದಿಗಳಾದ T O ಮತ್ತು J T O ಗಳು ತಾವು ಪಡೆದ ನಿರ್ದಿಷ್ಟವಾದ ವೃತ್ತಿ ಕೌಶಲ್ಯವನ್ನು I.T.I ಗಳಲ್ಲಿ ಅಳವಡಿಸದೇ, ಇವರುಗಳಿಗಾಗಿ ನಿರ್ದೇಶನಾಲಯ ಮತ್ತು ವಿಭಾಗೀಯ ಕಛೇರಿಗಳಲ್ಲಿ ತಾಂತ್ರಿಕ ಹುದ್ದೆಗಳನ್ನು ಸ್ಥಳಾಂತರಿಸಿಕೊಂಡು ವರ್ಗಾವಣೆ/ನಿಯೋಜನೆ ಮೇರೆಗೆ ಗುಮಾಸ್ತರ

ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕಿದೆಯೇ; ಪ್ರಸ್ತುತ ಈ ರೀತಿ ವರ್ಗಾವಣೆ ಮತ್ತು ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ TO ಮತ್ತು JTO ಗಳ ಹೆಸರು, ವೃತ್ತಿ, ಅವಧಿ, ನಿರ್ವಹಿಸುತ್ತಿರುವ ಕಾರ್ಯಸ್ವರೂಪದ ಸಂಪೂರ್ಣ ವಿವರಗಳನ್ನು ಒದಗಿಸುವುದು ;

(ಇ) TO ಮತ್ತು JTO ಗಳು ತಾವು ನೇಮಕಗೊಂಡ ಮಾತೃವೃತ್ತಿ ಹೊರತುಪಡಿಸಿ ಬೇರೆ ಬೇರೆ ವೃತ್ತಿಗಳಲ್ಲಿ ತರಬೇತಿ ನೀಡುವುದರಿಂದ ತರಬೇತಿದಾರರಿಗೆ ನಿರ್ದಿಷ್ಟವಾದ ತರಬೇತಿ ದೊರಕದೇ ತರಬೇತಿದಾರರು ವೃತ್ತಿ ಕೌಶಲ್ಯದಿಂದ ವಂಚಿತರಾಗಿದ್ದು, ಅಸಮಂಜಸ ನ್ಯೂನತೆಯನ್ನು ಸರಿಪಡಿಸಲು ಸರ್ಕಾರವು ಯಾವ ರೀತಿಯ ಕ್ರಮಕೈಗೊಳ್ಳಲಿದೆ ?

## "ಮಗುವಿಗೊಂದು ಮರ ಶಾಲೆಗೊಂದು ವನ" ಕಾರ್ಯಕ್ರಮ ಅನುಷ್ಠಾನದ ಬಗ್ಗೆ

**ಶ್ರೀ ಸಿ.ಹೆಚ್.ವಿಜಯ ಶಂಕರ(ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೦೫ (೨೧೪೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅರಣ್ಯ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾದ 'ಮಗುವಿಗೊಂದು ಮರ, ಶಾಲೆಗೊಂದು ವನ' ಈ ಕಾರ್ಯಕ್ರಮವನ್ನು ರಾಜ್ಯವ್ಯಾಪ್ತಿ ವ್ಯವಸ್ಥಿತವಾಗಿ ಹಾಗೂ ಕಾಲಬದ್ಧವಾಗಿ ಆಯಾ ಸಾಲಿಗೆ ಅನ್ವಯವಾಗುವಂತೆ ಅನುಷ್ಠಾನಗೊಳಿಸಲಾಗುತ್ತಿದೆಯೇ ;

(ಆ) ರಾಜ್ಯದಲ್ಲಿ ಇದುವರೆಗೆ ಶಾಲಾ ಆವರಣದಲ್ಲಿ ವನಸಂಪತ್ತನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಜಾಗ ಲಭ್ಯವಿರುವ ಹಾಗೂ ಶಾಲೆಗೊಂದು ವನ ಯೋಜನೆಯ ಅನುಕೂಲ ಪಡೆಯಲು ಒಪ್ಪಿರುವ ಹಾಗೂ ಇಲಾಖೆ ಗುರುತಿಸಿರುವ ಶಾಲೆಗಳ ಸಂಖ್ಯೆ ಎಷ್ಟು ;

(ಇ) ಮಗುವಿಗೊಂದು ಮರ ಯೋಜನೆ ಅನುಷ್ಠಾನಗೊಳಿಸುವಲ್ಲಿ ರಾಜ್ಯವ್ಯಾಪ್ತಿ ಈವರೆಗೆ ವೈಯಕ್ತಿಕವಾಗಿ ಎಷ್ಟು ಶಾಲಾ ಮಕ್ಕಳ ಅಭಿಪ್ರಾಯ ಪಡೆದು ಅದಕ್ಕನುಗುಣವಾಗಿ ಬೇಡಿಕೆ ಪಟ್ಟಿ ಸಿದ್ಧಪಡಿಸಲಾಗುತ್ತಿದೆಯೇ; (ಜಿಲ್ಲಾವಾರು ವಿವರ ಒದಗಿಸುವುದು)

(ಈ) ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಯಾವ ಯಾವ ಜಾತಿಯ ಸಸಿಗಳನ್ನು ವಿತರಣೆ ಮಾಡಲಾಗುತ್ತಿದೆ ;

(ಉ) ಈವರೆಗೆ ಅನುಷ್ಠಾನಗೊಂಡ ಒಟ್ಟು ಕಾರ್ಯಕ್ರಮದ ವಿವರಗಳನ್ನು ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಇನ್ನು ಹೆಚ್ಚು ಫಲಪ್ರದಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು (ಮಾಹಿತಿಯ ವಿವರಗಳನ್ನು ಒದಗಿಸುವುದು) ?

## ನೇಕಾರರ ಕ್ಷೇಮಾಭಿವೃದ್ಧಿ

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೦೬ (೨೧೨೦) ಮಾನ್ಯ ಜವಳಿ, ಬಂದರು, ಒಳನಾಡು ಮತ್ತು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯ ಭಾಗ್ಯನಗರದಲ್ಲಿ ರಾಜ್ಯ ಕೈಮಗ್ಗ ನಿಗಮದ ಕೈಮಗ್ಗ ಕೇಂದ್ರದಲ್ಲಿ ನೇಕಾರರಿಗೆ ಯಾವ ರೀತಿಯ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ ;

(ಆ) ಕಳೆದ ಎರಡು ವರ್ಷದ ಹಿಂದೆ ಇದ್ದ ನೇಕಾರರ ಸಂಖ್ಯೆ ಎಷ್ಟು;

(ಇ) ಪ್ರಸ್ತುತ ಇರುವ ನೇಕಾರರ ಸಂಖ್ಯೆ ಎಷ್ಟು; ಇವುಗಳ ಕ್ಷೇಮಾಭಿವೃದ್ಧಿಗೆ ನೀಡಿರುವ ಹಣವೆಷ್ಟು ;

(ಈ) ನೇಕಾರ ಸಂಖ್ಯೆಯಲ್ಲಿ ಕಡಿಮೆಯಾಗಿರಲು ಪ್ರಮುಖ ಕಾರಣಗಳೇನು ;

(ಉ) ಪ್ರಸ್ತುತ ಇಲ್ಲಿನ ನೇಕಾರರಿಗೆ ಇರುವ ಸಂಕಷ್ಟಗಳೇನು ;

(ಊ) ಇದನ್ನು ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳೇನು ?

**ಬಗರ್ ಹುಕುಂ ಸಾಗುವಳಿದಾರರು : ಸಾಗುವಳಿ ಚೀಟಿ ಹಂಚಿಕೆ**

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೦೭ (೨೧೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿದಾರರು ನಮೂನೆ ೫೦ ಮತ್ತು ೫೩ ರಲ್ಲಿ ೧೯೮೦ ರಿಂದ ೧೯೯೮ ರವರೆಗೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ;

(ಆ) ಸದರಿ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ಮಂಜೂರಾತಿಯಾಗಿರುತ್ತದೆ (ವಿವರ ನೀಡುವುದು) ;

(ಇ) ಮಂಜೂರಾತಿಯಾಗಿರುವವರಲ್ಲಿ ಎಷ್ಟು ಜನ ರೈತರಿಗೆ ಹಕ್ಕುಪತ್ರ (ಸಾಗುವಳಿ ಚೀಟಿ) ನೀಡಲಾಗಿದೆ (ವಿವರ ನೀಡುವುದು) ;

(ಈ) ಮಂಜೂರಾತಿಯಾಗಿದ್ದೂ ಹಕ್ಕುಪತ್ರ ನೀಡದಿರುವ ರೈತರ ಸಂಖ್ಯೆ ಎಷ್ಟು; ನೀಡದಿರಲು ಕಾರಣವೇನು; ನೀಡಲು ಬೇಕಾಗುವ ಕಾಲಾವಧಿಯೇನು ;

(ಉ) ಮಂಜೂರಾತಿಯಾಗಿ, ಅಧಿಕೃತ ಜ್ಞಾಪನವೂ ಆಗಿ, ಅದರ ಕಿಮ್ಮತ್ತು ಹಣವನ್ನು ರೈತರರಿಂದ ಪಾವತಿಸಿಕೊಂಡಿದ್ದೂ ಹಕ್ಕುಪತ್ರ ನೀಡದಿರುವವರ ಸಂಖ್ಯೆ ಎಷ್ಟು; ನೀಡದಿರಲು ಕಾರಣವೇನು; ನೀಡಲು ಬೇಕಾಗುವ ಕಾಲಾವಧಿಯೇನು ;

(ಊ) ಸಾಗುವಳಿ ಚೀಟಿ ನೀಡುವಂತೆ ಮಾನ್ಯ ಉಚ್ಚ ನ್ಯಾಯಾಲಯ, ಜಿಲ್ಲಾಧಿಕಾರಿಗಳ ಆದೇಶ, ಉಪ ವಿಭಾಗಾಧಿಕಾರಿಗಳ ಆದೇಶವಿದ್ದೂ ನೀಡದಿರುವ ರೈತರ ಸಂಖ್ಯೆ ಎಷ್ಟು; ನೀಡದಿರಲು ಕಾರಣವೇನು; ನೀಡಲು ಬೇಕಾಗುವ ಕಾಲಾವಧಿ ಎಷ್ಟು ;

(ಋ) ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ/೩೩/ಎಲ್‌ಜಿಪಿ/೨೦೦೭ ದಿನಾಂಕ:೨೬-೦೧-೨೦೦೮ ಹಾಗೂ ದಿನಾಂಕ: ೦೬-೦೨-೨೦೦೮ರಲ್ಲಿ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ ಜಾರಿಗೆ ಬಂದಿರುವ ಆದೇಶಗಳು ೨೦೦೪ರಲ್ಲಿ ಮಂಜೂರಾತಿಯಾಗಿರುವ ಈ ರೈತರ ಪ್ರಕರಣಗಳಿಗೆ ಅನ್ವಯವಾಗುವುದೇ; ಇಲ್ಲವಾದಲ್ಲಿ ಸಾಗುವಳಿ ಚೀಟಿ ನೀಡಲು ವಿಳಂಬವಾಗಲು ಕಾರಣವೇನು; ನೀಡಲು ಬೇಕಾಗುವ ಕಾಲಾವಧಿ ಏನು ;

(ಎ) ಈ ಸಂಬಂಧ ಪತ್ರ ಸಂಖ್ಯೆ: LND(A) CR, 82/2012-13 ದಿನಾಂಕ:೩೦-೧೧-೨೦೧೨ರ ಪತ್ರದಲ್ಲಿ ಸದರಿ ಸಾಗುವಳಿ ಚೀಟಿ ಕೋರಿರುವ ಅರ್ಜಿಗಳನ್ನು ಕಾನೂನು ಇಲಾಖೆಯ ಅಭಿಪ್ರಾಯ ಪಡೆಯುವಂತೆ ಕೋರಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇವರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಇವರಿಗೆ ಪತ್ರ ಬಂದಿರುವುದು ನಿಜವೇ; ಬಂದಿದ್ದಲ್ಲಿ, ಪ್ರಕ್ರಿಯೆ ಯಾವ ಹಂತದಲ್ಲಿದೆ; ಕಾನೂನು ಅಭಿಪ್ರಾಯ ಪಡೆಯಲಾಗಿದೆಯೇ; ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು ?

## ಕರಡಿಹಳ್ಳಿ ಸ.ನಂ.೧೯ರಲ್ಲಿ ಅರಣ್ಯ ಅಭಿವೃದ್ಧಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) :-**

೧೭೦೮ (೨೧೯೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಕರಡಿಹಳ್ಳಿ ಸ.ನಂ.೧೯ರ ಜಮೀನಿನಲ್ಲಿ ಅರಣ್ಯ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು ;

(ಆ) ಸರ್ಕಾರದಿಂದ ಅರಣ್ಯ ಅಭಿವೃದ್ಧಿಗೆ ಎಷ್ಟು ಹಣ ವ್ಯಯ ಮಾಡಲಾಗಿದೆ (ಕಳೆದ ಮೂರು ವರ್ಷದ ವಿವರ ಒದಗಿಸುವುದು) ?

## ಕರಡಿಹಳ್ಳಿ ಸ.ನಂ.೧೯ರ ಜಮೀನಿನ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ ) :-**

೧೭೦೯ (೨೧೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಕರಡಿಹಳ್ಳಿ ಸ.ನಂ.೧೯ರಲ್ಲಿ ಒಟ್ಟು ಎಷ್ಟು ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ ;

(ಆ) ಅರಣ್ಯ ಇಲಾಖೆಗೆ ವರ್ಗಾಯಿಸಿರುವ ದಿನಾಂಕ ಮತ್ತು ಆದೇಶದ ಪ್ರತಿಗಳನ್ನು ಒದಗಿಸುವುದು ;

(ಇ) ಹಾಗೆಯೇ ಎಷ್ಟು ಎಕರೆ ಪ್ರದೇಶ ಗೋಮಾಳವಾಗಿರುತ್ತದೆ; ಉಳಿಕೆ ಎಷ್ಟು ಎಕರೆ ಪ್ರದೇಶದಲ್ಲಿ ರೈತರು ವ್ಯವಸಾಯ ಮಾಡುತ್ತಿದ್ದಾರೆ (ಹೆಸರು ಸಮೇತ ವಿವರ ಒದಗಿಸುವುದು) ?

## ಅರಣ್ಯ ನಾಶ

**ಶ್ರೀಮತಿ ವಿಮಲಾಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೧೦ (೨೧೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳೆಷ್ಟು ;

(ಆ) ಪ್ರತಿ ವರ್ಷ ಎಷ್ಟು ಪ್ರಮಾಣದ ಅರಣ್ಯ ನಾಶವಾಗುತ್ತಿದೆ; ಇದಕ್ಕೆ ಕಾರಣಗಳೇನು (ವಿವರ ನೀಡುವುದು) ;

(ಇ) ನಾಶವಾಗುತ್ತಿರುವ ಅರಣ್ಯ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಅರಣ್ಯ ನಾಶದಿಂದ ಯಾವ ಯಾವ ಜೀವ ಸಂಕುಲದ ಮೇಲೆ ಪರಿಣಾಮ ಬೀರಿದೆ (ವಿವರ ನೀಡುವುದು) ;

(ಉ) ಅರಣ್ಯ ನಾಶದಿಂದ ಪ್ರತಿ ವರ್ಷದ ಮಳೆಯ ಪ್ರಮಾಣ ಎಷ್ಟು ಕಡಿಮೆಯಾಗಿದೆ (ವಿವರ ನೀಡುವುದು) ?

## ವಿವಿಧ ನದಿಗಳಿಂದ ಲಭ್ಯವಾಗುವ ನೀರಿನ ಪ್ರಮಾಣ

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೧೭೧೧ (೨೧೪೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ, ಕೃಷ್ಣ, ಪೆನ್ನಾರ್, ಗೋದಾವರಿ ಕಣಿವೆಗಳ ಹಾಗೂ ಪಶ್ಚಿಮ ಘಟ್ಟ ಮುಂತಾದ ಮೂಲಗಳಿಂದ ಪ್ರತಿ ವರ್ಷ ಸರಾಸರಿ ಲಭ್ಯವಾಗುವ ನೀರಿನ ಪ್ರಮಾಣ ಎಷ್ಟು; ಲಭ್ಯವಾಗಿರುವ ಪ್ರಮಾಣದಲ್ಲಿ ಎಷ್ಟು ನೀರನ್ನು ನೀರಾವರಿಗಾಗಿ, ವಿದ್ಯುತ್

ಅ೩೩೪-೨

ಉತ್ಪಾದನೆ ಮುಂತಾದ ಜಲೋಪಯೋಗಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲಾಗಿದೆ; ಇದುವರೆವಿಗೂ ತಗುಲಿರುವ ವೆಚ್ಚ ಎಷ್ಟು; ಬಳಕೆ ಮಾಡಿಕೊಳ್ಳದೆ ಸಮುದ್ರದ ಪಾಲಾಗಿರುವ ಅಥವಾ ಅಕ್ಕಪಕ್ಕದ ರಾಜ್ಯಗಳಿಗೆ ಹರಿದು ನೀರು ಎಷ್ಟು; ಅಂತಹ ನೀರಿನ ಬಳಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಕಾವೇರಿ ಕಣಿವೆ, ಕೃಷ್ಣ ಕಣಿವೆ ನದಿಯ ಪಾತ್ರಗಳಲ್ಲಿ ನಿರ್ಮಾಣವಾಗಿರುವ ಜಲಾಶಯಗಳೆಷ್ಟು; ಅವುಗಳ ನಿರ್ಮಾಣಕ್ಕೆ ತಗುಲಿರುವ ವೆಚ್ಚ ಎಷ್ಟು; ಆ ವೆಚ್ಚದಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಕೆಳಭಾಗದ ರಾಜ್ಯಗಳಿಂದ (Lower Raiperian State )(ಕಣಿವೆಗಳ ನೀರನ್ನು ಪಡೆಯುತ್ತಿರುವ) ಸಂಬಂಧಪಟ್ಟ ಜಲಾಶಯ ನಿರ್ಮಾಣಕ್ಕೆ ಮತ್ತು ನಿರ್ವಹಣೆಗೆ ಪ್ರತಿವರ್ಷ ನೀಡಲಾಗುತ್ತಿರುವ ಹಣವೆಷ್ಟು (ಜಲಾಶಯವಾರು ವಿವರವನ್ನು ನೀಡುವುದು) ;

(ಇ) ರಾಜ್ಯದ ಯಾವ ಯಾವ ಜಲಾಶಯವಾರು ಯಾವ ಯಾವ ರಾಜ್ಯಕ್ಕೆ ಎಷ್ಟೆಷ್ಟು ಪ್ರಮಾಣದ ನೀರನ್ನು ಪ್ರತಿವರ್ಷ ಬಿಡಲಾಗುತ್ತಿದೆ; ಜಲಾಶಯವಾರು ಮಾಹಿತಿ ನೀಡುವುದು ಹೂಳು ತುಂಬಿರುವ ಜಲಾಶಯಗಳೆಷ್ಟು; ಹೂಳನ್ನು ತೆಗೆಯಲು ತೆಗೆದುಕೊಂಡಿರುವ ಕ್ರಮಗಳೇನು; ಅದಕ್ಕೆ ತಗುಲಿರುವ ವೆಚ್ಚ ಎಷ್ಟು; ಆ ವೆಚ್ಚವನ್ನು ಯಾರು ಯಾರು ಭರಿಸುತ್ತಿದ್ದಾರೆ (ಜಲಾಶಯವಾರು ಮಾಹಿತಿ ನೀಡುವುದು) ;

(ಈ) ರಾಜ್ಯದ ಜಲಾಶಯಗಳಿಂದ ರಾಜ್ಯದ ಕೆಳಭಾಗದ ( Lower Raiperian State ) ಮತ್ತು ಮೇಲ್ಭಾಗದ ರಾಜ್ಯಗಳು

(Upper Raiperian State)ಪಡೆಯುತ್ತಿರುವ ನೀರಿನ ಪ್ರಮಾಣ ಎಷ್ಟು ;

(ಉ) ರಾಜ್ಯದ ಜಲಾಶಯಗಳಿಂದ ನೀರನ್ನು ಪಡೆಯುತ್ತಿರುವ ರಾಜ್ಯದ ಕೆಳಭಾಗದ ಮತ್ತು ಮೇಲ್ಭಾಗದ ರಾಜ್ಯಗಳು ಜಲಾಶಯಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಖರ್ಚು ಮಾಡುತ್ತಿರುವ ವೆಚ್ಚ ಎಷ್ಟು (ಜಲಾಶಯವಾರು ವಿವರ ನೀಡುವುದು) ?

## ಜಲಾಶಯಗಳಲ್ಲಿ ನೀರು ಸಂಗ್ರಹಣೆ ಮತ್ತು ತುಂಬಿರುವ ಹೂಳಿನ ಪ್ರಮಾಣ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೧೨ (೨೧೫೧) ಮಾನ್ಯ ಭಾರಿ ಮತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ ಯಾವ ಜಲಾಶಯಗಳಲ್ಲಿ ಎಷ್ಟು ಪ್ರಮಾಣದ ಹೂಳು ತುಂಬಿದೆ; ಜಲಾಶಯಗಳಲ್ಲಿ ತುಂಬಿರುವ ಹೂಳಿನ ಪ್ರವಾಣವನ್ನು ತಿಳಿಯುವ ತಂತ್ರಜ್ಞಾನವನ್ನು ಇಲಾಖೆ ಹೊಂದಿದೆಯೇ; ಜಲಾಶಯಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ರಾಜ್ಯದಲ್ಲಿ ಒಂದೇ ವಾರದ ಮಳೆಯಲ್ಲಿ ಬಹುತೇಕ ಜಲಾಶಯಗಳು ತುಂಬಿದೆ ಎಂದು ವರದಿಯಾಗಿರುವುದು ನಿಜವೇ; ನಿಜವಾಗಿದ್ದಲ್ಲಿ, ನೀರು ಸಂಗ್ರಹಣೆಯ ಪ್ರಮಾಣವೆಷ್ಟು ಮತ್ತು ತುಂಬಿರುವ ಹೂಳಿನ ಪ್ರಮಾಣವೆಷ್ಟು; (ಜಲಾಶಯವಾರು ವಿವರ ನೀಡುವುದು) ?

## ವಿವಿಧ ಉದ್ದೇಶಗಳಿಗೆ ನೀಡಲಾದ ಕಂದಾಯ ಭೂಮಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೧೩ (೨೧೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಉದ್ದೇಶಗಳಿಗಾಗಿ ಎಷ್ಟು ವಿಸ್ತೀರ್ಣದ ಕಂದಾಯ ಭೂಮಿಯನ್ನು ಯಾವ ಯಾವ ಇಲಾಖೆಗಳಿಗೆ ನೀಡಲಾಗಿದೆ (ತಾಲ್ಲೂಕುವಾರು, ವರ್ಷವಾರು, ಇಲಾಖಾವಾರು ವಿವರ ನೀಡುವುದು) ;

(ಆ) ಕಳೆದ ಮೂರು ವರ್ಷಗಳಲ್ಲಿ ಅರ್ಜಿ ನಮೂನೆ ೫೦, ೫೩ ಮತ್ತು ನಿವೇಶನಗಳಿಗಾಗಿ ಮತ್ತು ಸಂಘ ಸಂಸ್ಥೆಗಳಿಗೆ ಮತ್ತು ಖಾಸಗಿಯವರಿಗೆ ನೀಡಲಾದ ಕಂದಾಯ ಭೂಮಿಯ ವಿಸ್ತೀರ್ಣವೆಷ್ಟು (ತಾಲ್ಲೂಕುವಾರು, ವರ್ಷವಾರು, ವಿವರ ನೀಡುವುದು) ;

(ಇ) ಹಿಂದಿನ ಸರ್ಕಾರದ ಉದ್ದೇಶಿತ ರೈತ ಕುಮ್ಕಿ ಹಕ್ಕನ್ನು ಖಾಯಂ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಮಂಜೂರು ಮಾಡುವುದಾದಲ್ಲಿ ಯಾವಾಗ ವಿಧೇಯಕವನ್ನು ಮಂಡಿಸಲಾಗುವುದು; ಇಲ್ಲವಾದಲ್ಲಿ ಕಾರಣವೇನು ?

## ಕಿಂಡಿ ಅಣೆಕಟ್ಟುಗಳ ನಿರ್ವಹಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೧೪ (೨೧೫೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಮತ್ತು ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಕಿಂಡಿ ಅಣೆಕಟ್ಟುಗಳ ನಿರ್ವಹಣೆಗೆ ಮಂಜೂರಾದ ಕಾಮಗಾರಿಗಳು ಎಷ್ಟು ಮತ್ತು ಯಾವುವು (ತಾಲ್ಲೂಕುವಾರು, ವರ್ಷವಾರು, ಕಾಮಗಾರಿವಾರು ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿ ಪ್ರಸಕ್ತ ಮತ್ತು ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಕಿಂಡಿ ಅಣೆಕಟ್ಟುಗಳ ನಿರ್ವಹಣೆಗೆ ಮಂಜೂರಾದ ಕಾಮಗಾರಿಗಳಲ್ಲಿ ಅಧೀಕ್ಷಕ ಅಭಿಯಂತರರಲ್ಲಿ ಕರಾರು ಒಪ್ಪಂದ ಪ್ರಕ್ರಿಯೆ ಪೂರೈಸಲ್ಪಟ್ಟ ಕಾಮಗಾರಿಗಳು ಎಷ್ಟು ಮತ್ತು ಯಾವುವು; ಕರಾರು ಒಪ್ಪಂದ ಪ್ರಕ್ರಿಯೆ ಪೂರೈಸಲ್ಪಟ್ಟ ಕಾಮಗಾರಿಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳು ಯಾವುವು ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು; ಇನ್ನೂ ಪ್ರಾರಂಭಗೊಳ್ಳದ ಕಾಮಗಾರಿಗಳು ಯಾವುವು ;

(ಇ) ಜಿಲ್ಲೆಯಲ್ಲಿ ಪ್ರಸಕ್ತ ಮತ್ತು ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಕಿಂಡಿ ಅಣೆಕಟ್ಟುಗಳ ನಿರ್ವಹಣೆಗೆ ಮಂಜೂರಾದ ಕಾಮಗಾರಿಗಳಲ್ಲಿ ಹಣಪಾವತಿಸಿದ ಕಾಮಗಾರಿಗಳು ಯಾವುವು ಮತ್ತು ಪಾವತಿಸಲು ಬಾಕಿ ಇರುವ ಕಾಮಗಾರಿಗಳು ಯಾವುವು; ಬಾಕಿ ಹಣವನ್ನು ಯಾವಾಗ ಪಾವತಿಸಲಾಗುವುದು ?

## ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೧೫(೨೧೫೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆಯ ಸಮಗ್ರ ಯೋಜನಾವರದಿ (Detailed Project Report)ಯಲ್ಲಿ ರಾಜ್ಯದ ಯಾವ ಯಾವ ತಾಲ್ಲೂಕುಗಳ ಯಾವ ಯಾವ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುವುದು; ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು; (ಯೋಜನೆಯ ಸಮಗ್ರ ಯೋಜನಾ ವರದಿ (Detailed Project Report)ಯ ಪ್ರತಿ ಒದಗಿಸುವುದು) ;

(ಆ) ಸರ್ಕಾರವು ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆಯ ಮಾಹಿತಿಯನ್ನು ಅಸ್ಪಷ್ಟವಾಗಿ, ಅಪೂರ್ಣವಾಗಿ ಮತ್ತು ವರದಿಯನ್ನು ಮುಚ್ಚಿಡುತ್ತಿರುವ ಉದ್ದೇಶವೇನು; ಇಲ್ಲವಾದಲ್ಲಿ, ಹಿಂದೆ ಸಮಗ್ರ ಯೋಜನಾ ವರದಿಯ ಪ್ರತಿಯನ್ನು ನೀಡದೇ ಇರಲು ಕಾರಣವೇನು ;

(ಇ) ಈ ಯೋಜನೆಗೆ ಭೂ ಸ್ವಾಧೀನಪಡಿಸಿಕೊಂಡ ಮತ್ತು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿತ ಖಾಸಗಿ ಭೂಮಿ ಎಷ್ಟು, ಅರಣ್ಯ ಭೂಮಿ ಎಷ್ಟು ಮತ್ತು ಕಂದಾಯ ಭೂಮಿ ಎಷ್ಟು (ತಾಲ್ಲೂಕುವಾರು, ವಿಸ್ತೀರ್ಣವಾರು ಪ್ರತ್ಯೇಕ ವಿವರ ನೀಡುವುದು) ;

(ಈ) ಸದರಿ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಳ್ಳದೆ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ

ಪೂರ್ಣಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇ; ಇಲ್ಲವಾದಲ್ಲಿ ಯಾವ ಸೂತ್ರದಲ್ಲಿ ಪರಿಹರಿಸಲಾಗುವುದು?

## ಭೂ ನ್ಯಾಯಮಂಡಳಿ ಮತ್ತು ಅಕ್ರಮ –ಸಕ್ರಮ ಸಮಿತಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೭೧೬(೨೧೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂ ನ್ಯಾಯ ಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಗಳಲ್ಲಿ ಅರ್ಜಿ ನಮೂನೆ ೫೦ ಮತ್ತು ೫೩ ರಡಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಿಲ್ಲೆಗಳಲ್ಲಿ 7A ಅಡಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸದರಿ ಜಿಲ್ಲೆಗಳ ಕಂದಾಯ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಉ) ಈ ಎರಡು ಜಿಲ್ಲೆಗಳ ಭೂ ನ್ಯಾಯ ಮಂಡಳಿ ಸಮಿತಿ ಮತ್ತು ಅಕ್ರಮ–ಸಕ್ರಮ ಸಮಿತಿ ರಚಿಸಲಾಗಿದೆಯೇ (ರಚಿಸಲಾಗಿದ್ದಲ್ಲಿ ಸಮಿತಿಯ ಸಂಪೂರ್ಣ ವಿವರ ಒದಗಿಸುವುದು) ?

## ಬಂದರುಗಳ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನ

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) :-**

೧೭೧೭(೨೧೫೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ, ಉಡುಪಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಬಂದರುಗಳ ಅಭಿವೃದ್ಧಿಗಾಗಿ ೨೦೧೨ ರಿಂದ ೨೦೧೮ರವರೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು;

(ಆ) ದಕ್ಷಿಣ ಕನ್ನಡ ಜಿಲ್ಲೆಯ ಹಳೆ ಬಂದರಿನಲ್ಲಿರುವ ಮೀನುಗಾರಿಕಾ ಬಂದರಿನಲ್ಲಿ ಒಣ ಮೀನು ಮಾರಾಟ ಮಾಡುವ ಮಹಿಳೆಯರಿಗಾಗಿ ಸ್ಥಳವನ್ನು ಗುರುತಿಸಿ ನೀಡಲಾಗಿದೆಯೇ; ಇದ್ದಲ್ಲಿ ಎಷ್ಟು ಸ್ಥಳವನ್ನು ನೀಡಲಾಗಿದೆ; ಎಷ್ಟು ವಿಸ್ತೀರ್ಣವಿದೆ; (ವಿವರ ನೀಡುವುದು)

(ಇ) ಒಣ ಮೀನು ಮಾರಾಟ ಮಾಡುವ ಬಗ್ಗೆ ಬಂದರು ಇಲಾಖೆಯಿಂದ ಯಾವ ಯಾವ ಬಂದರಿನಲ್ಲಿ ಸ್ಥಳಾವಕಾಶವನ್ನು ಒದಗಿಸಲಾಗಿದೆ; (ವಿವರ ನೀಡುವುದು)

(ಈ) ಮಂಗಳೂರು ಬಂದರನ್ನು ವಿಸ್ತರಣೆ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

(ಉ) ಮಂಗಳೂರಿನಿಂದ ಲಕ್ಷದ್ವೀಪಕ್ಕೆ ತೆರಳುವ ಹಡಗುಗಳಿಗೆ ನಿಲ್ಲುವ ಸ್ಥಳವನ್ನು ಗುರುತಿಸಲಾಗಿದೆಯೇ; ಲಕ್ಷದ್ವೀಪ ಸರ್ಕಾರದಿಂದ (ಆಡಳಿತದಿಂದ) ಅಭಿವೃದ್ಧಿಗಾಗಿ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆಯೇ; ಇದ್ದರೆ , ಈ ಬಗ್ಗೆ ವಿವರ ನೀಡುವುದು;

(ಊ) ಸದರಿ ಮೂರೂ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕಾ ಕೆಲಸಗಾರರಿಗೆ ಮಹಿಳೆಯರಿಗೆ ಹಾಗೂ ಪುರುಷರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ವ್ಯವಸ್ಥೆಯನ್ನು ಮಾಡಲಾಗಿದೆಯೇ (ಇದ್ದರೆ ವಿವರ ನೀಡುವುದು) ?

## ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) :-**

೧೭೧೮ (೨೧೫೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಈ ಬಗ್ಗೆ ಸಾರ್ವಜನಿಕರಿಂದ/ ಕ್ರೀಡಾಭಿಮಾನಿಗಳಿಂದ ಬೇಡಿಕೆ ಬಂದಿದೆಯೇ ;

(ಆ) ಪ್ರಸ್ತುತ ಕ್ರಿಕೆಟ್ ಪಂದ್ಯಾಟದ ಬಗ್ಗೆ ಕ್ರೀಡಾಪಟುಗಳಿಗೆ ಉತ್ತೇಜನವನ್ನು ನೀಡಲು ಯಾವ ಪ್ರದೇಶದಲ್ಲಿ ಅವಕಾಶವನ್ನು ನೀಡಲಾಗಿದೆ (ವಿವರ ನೀಡುವುದು) ;

(ಇ) ರಾಜ್ಯ ಮಟ್ಟದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯವನ್ನು ಮಂಗಳೂರಿನಲ್ಲಿ ನಡೆಸಲು ಯಾವುದಾದರೂ ಮೈದಾನವನ್ನು ಸರ್ಕಾರ ಸಿದ್ಧಪಡಿಸಿದೆಯೇ (ವಿವರ ನೀಡುವುದು) ;

(ಈ) ಕ್ರಿಕೆಟ್ ಆಟಕ್ಕೆ ಉತ್ತೇಜನ ನೀಡಲು ಸರ್ಕಾರ ಏನಾದರೂ ಅನುದಾನವನ್ನು ಮೀಸಲು ಇಡಲಾಗಿದೆಯೇ (ಇದ್ದರೆ ವಿವರ ನೀಡುವುದು, ಇಲ್ಲದಿದ್ದರೆ ಏನಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ತಿಳಿಸುವುದು) ?

## ಸಮುದ್ರ ಕೊರೆತ ತಡೆಯಲು ತಡೆಗೋಡೆಗಳ ನಿರ್ಮಾಣ

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) :-**

೧೭೧೯ (೨೧೫೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳಲ್ಲಿ ಕಳೆದ ೩ ವರ್ಷಗಳಿಂದ ಸಮುದ್ರ ಕೊರೆತವನ್ನು ತಡೆಯಲು ತಡೆಗೋಡೆ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ನೀಡಲಾಗಿದೆ ;

(ಆ) ತಡೆಗೋಡೆ ನಿರ್ಮಾಣಕ್ಕೆ ಬಿಡುಗಡೆ ಮಾಡಿದ ಅನುದಾನ ಸಮರ್ಪಕವಾಗಿ ಬಳಸಲಾಗಿದೆಯೇ ; ದುರುಪಯೋಗವಾದ ಅನುದಾನದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) ಕೇಂದ್ರ ಮತ್ತು ರಾಜ್ಯ ಸರ್ಕಾರವು ಸಮುದ್ರ ಕೊರೆತದ ತಡೆಗೋಡೆ ನಿರ್ಮಾಣ ಯಾವುದಾದರೂ ಯೋಜನೆ ಮತ್ತು ಶಾಶ್ವತ ಪರಿಹಾರ ರೂಪದಲ್ಲಿ ಹಮ್ಮಿಕೊಳ್ಳಲಾಗಿದೆಯೇ ;(ವಿವರ ನೀಡುವುದು)

(ಈ) ಸಮುದ್ರದ ಬದಿಯಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಸಮುದ್ರ ಕೊರೆತದಿಂದ ನಿರ್ವಸಿತರಾದವರಿಗೆ ಪುನರ್ ವಸತಿ ಕಲ್ಪಿಸಲಾಗಿದೆಯೇ (ಇದ್ದಲ್ಲಿ, ವಿವರ ನೀಡುವುದು) ?

## ೯೪ ಸಿ ಅಡಿಯಲ್ಲಿ ಬಂದ ಅರ್ಜಿಗಳು

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು) :–**

೧೭೨೦ (೨೧೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೯೪ಸಿ ಅಡಿಯಲ್ಲಿ ಬಂದ ಒಟ್ಟು ಅರ್ಜಿಗಳು ಎಷ್ಟು ; ಅರ್ಜಿಗಳ ಮಂಜೂರಾತಿಗೆ ಏನು ಕ್ರಮ ಕೈಗೊಳ್ಳಲಾಗಿದೆ ; ಈ ಬಗ್ಗೆ ಆದಾಯದ ಮಿತಿ ಎಷ್ಟು ;

(ಆ) ಅರ್ಜಿ ನಮೂನೆ ೫೦ ರಡಿಯಲ್ಲಿ ಮತ್ತು ೫೩ ರಡಿಯಲ್ಲಿ ಒಟ್ಟು ಬಂದ ಅರ್ಜಿಗಳು ಎಷ್ಟು ; ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ; ಒಟ್ಟು ಎಷ್ಟು ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ ;

(ಇ) ಎಷ್ಟು ಅರ್ಜಿಗಳು ವಿಚಾರಣೆಗೆ ಬಾಕಿ ಇವೆ ; ಮಂಗಳೂರು ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಅಕ್ರಮ–ಸಕ್ರಮ ಮಾಡಲು ಅರ್ಜಿಗಳನ್ನು ಪಡೆಯುವ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ (ಇದ್ದರೆ, ತಿಳಿಸುವುದು) ಇಂತಹ ಎಷ್ಟು ಮಂದಿ ನಗರದ ಒಳಗಡೆ ವಾಸವಾಗಿದ್ದಾರೆ (ವಿವರ ನೀಡುವುದು) ?

## ಮಾಮನಿ ಕೆರೆ (ಕಾಲುವೆ ರಸ್ತೆ) ದುರಸ್ತಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೭೨೧ (೨೧೬೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಮಾಮನಿ ಕೆರೆ ರಸ್ತೆ (ಕಾಲುವೆ ರಸ್ತೆ)ಯ

03398-4

ಮೂರನೇ ಬ್ಲಾಕ್‌ನ ಎರಡು ಕಿ.ಮೀ. ರಸ್ತೆ ಹಾಗೂ ಕಾಲುವೆ ತುಂಬಾ ಕೆಟ್ಟಿದ್ದು, ರೈತರು ಬೆಳೆದ ಫಸಲುಗಳನ್ನು ಮಾರುಕಟ್ಟೆಗೆ ಸಾಗಿಸಲು ಹಾಗೂ ರೈತರ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದ್ದು, ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರಕ್ಕೆ ಮನವಿ ಮಾಡಿಕೊಂಡ ಸಂಗತಿ ನಿಜವೇ ;

(ಆ) ಮಾಮನಿ ಕೆರೆ (ಕಾಲುವೆ ರಸ್ತೆ) ೩ನೇ ಬ್ಲಾಕ್‌ನ ಕಾಲುವೆಯು ಸಹ ಹೂಳು ತುಂಬಿ ಗಿಡ, ಕಂಟಿಗಳು ಬೆಳೆದು, ನೀರು ಸರಾಗವಾಗಿ ಮುಂದೆ ಹೋಗದೇ ಅಲ್ಲಿಯೇ ಇಂಗುತ್ತಿರುವ ಕಾಲುವೆಯನ್ನು ಸಹ ದುರಸ್ತಿ ಮಾಡಲು ಮನವಿಗಳು ಬಂದಿವೆಯೇ ;

(ಇ) ಕೆನಾಲ್ ರಸ್ತೆ ದುರಸ್ತಿ ಮಾಡಲು ಹಾಗೂ ಕಾಲುವೆ ರಸ್ತೆ ದುರಸ್ತಿ ಮಾಡಲು ಅಂದಾಜು ವೆಚ್ಚ ಪತ್ರಿಕೆ ತಯಾರಿಸಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಹಣ ಬೇಕಾಗುವುದು ;

(ಈ) ರೈತರಿಗೆ ಅನಾನುಕೂಲತೆ ಆಗುತ್ತಿದ್ದು ಹಾಗೂ ಅತೀ ಅವಶ್ಯವಿದ್ದು ಕೂಡಲೇ ಈ ಕೆಲಸ ಕೈಗೊಳ್ಳಲಾಗುವುದೇ ?

## ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ತುಂಬುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಬೈಲಹೊಂಗಲ ಕ್ಷೇತ್ರ) :-**

೧೭೨೨ (೨೧೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಹುದ್ದೆಗಳು ಖಾಲಿ ಇರುವುದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಕೂಡಲೇ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ ?

## ಶಿವಯೋಗಿ ಮಂದಿರ ದೇವಸ್ಥಾನದ ಪ್ರವಾಹ ಸಂರಕ್ಷಣಾ ಕಾಮಗಾರಿ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೭೨೩ (೨೧೬೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾದಾಮಿ ತಾಲ್ಲೂಕಿನ ಶಿವಯೋಗಮಂದಿರ ದೇವಸ್ಥಾನದ ಆವರಣಕ್ಕೆ ಹಾನಿ ಆಗದಂತೆ ಮಾಡಲು ಸಣ್ಣ ನೀರಾವರಿ ಇಲಾಖೆಯಿಂದ ಪ್ರವಾಹ ಸಂರಕ್ಷಣೆ ಕಾಮಗಾರಿ ಅಡಿ ಒದಗಿಸಬಹುದಾದ ಅನುದಾನದಡಿಯಲ್ಲಿ ಮೂವತ್ತೈದು ಲಕ್ಷ ರೂ. ಬಿಡುಗಡೆ ಮಾಡಿ ಪ್ರಥಮ ಹಂತದ ಕೆಲಸ (ಅರ್ಧಭಾಗ ಮಾತ್ರ) ಮುಗಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈಗಾಗಲೇ ಮಾಡಿದ ಪ್ರಥಮ ಹಂತದ ಕೆಲಸ ಉತ್ತಮವಾಗಿದ್ದು, ಮಂದಿರ ಸಂರಕ್ಷಣೆ ಮಾಡಿದ್ದು ಇನ್ನೂ ಬಾಕಿ ಉಳಿದ ಕೆಲಸ (ಎರಡನೇ ಹಂತದ ಕೆಲಸ) ಮಾಡಲು ಪ್ರವಾಹ ಸಂರಕ್ಷಣೆ

ಕಾಮಗಾರಿ ಅಡಿ ಒದಗಿಸಬಹುದಾದ ಅನುದಾನದಡಿಯಲ್ಲಿ ನಲ್ವತ್ತೈದು ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಹಾಗಿದ್ದಲ್ಲಿ, ಐತಿಹಾಸಿಕ ಹಿನ್ನೆಲೆಯಲ್ಲಿ ಇದ್ದ ಪುರಾತನ ಶಿವಯೋಗಮಂದಿರ ದೇವಸ್ಥಾನ ಹಾನಿಯಾಗುವುದನ್ನು ತಪ್ಪಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ?

**ಶಿವಯೋಗಿ ಮಂದಿರದಲ್ಲಿ ಸುಬಾಬುಲ್ ಗಿಡಗಳನ್ನು ಬೆಳೆಸುವುದು**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೭೨೪ (೨೧೬೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗಿ ಮಂದಿರದಲ್ಲಿ ಇಲಾಖೆಯಿಂದ ಐವತ್ತು ಎಕರೆ ಕ್ಷೇತ್ರದಲ್ಲಿ ಗೋಶಾಲೆಯಲ್ಲಿ ಇರುವ ಆಕಳುಗಳ ಸಲುವಾಗಿ ಸುಬಾಬುಲ್ ಗಿಡಗಳನ್ನು ಹಚ್ಚಲು ಸರ್ಕಾರ ಆದೇಶ ಮಾಡಿರುವ ಸಂಗತಿ ನಿಜವೇ ;

(ಆ) ಇಲ್ಲಿ ಅರಣ್ಯ ಬೆಳೆಸಿದಲ್ಲಿ ಆ ಭಾಗದಲ್ಲಿ ಹೆಚ್ಚಾಗಿ ಮಳೆ ಆಗಲು ಹಾಗೂ ಅತಿಕ್ರಮಣ ತಪ್ಪಿಸಲು ಕೂಡಲೇ ಆದೇಶದ ಪ್ರಕಾರ ಗಿಡ ಹಚ್ಚಲು ಕ್ರಮ ಕೈಗೊಳ್ಳುಲಾಗುವುದೇ ?

## ಚಿಕ್ಕಪಡಸಲಗಿ ಸಮೀಪ ಕೃಷ್ಣಾನದಿಗೆ ಸೇತುವೆ ನಿರ್ಮಾಣ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೨೫ (೨೧೬೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜಮಖಂಡಿಯಿಂದ ಬಿಜಾಪುರಕ್ಕೆ ಹೋಗುವ ಮಾರ್ಗ ಮಧ್ಯೆ ಚಿಕ್ಕಪಡಸಲಗಿ ಗ್ರಾಮದ ಹತ್ತಿರ ಕೃಷ್ಣಾನದಿಗೆ ಅಡ್ಡಲಾಗಿರುವ (ಬ್ರಿಡ್ಜ್) ಸೇತುವೆಯು ಆಲಮಟ್ಟಿ ನೀರಿನ ಮಟ್ಟವನ್ನು ೫೨೪.೭ ಮೀ. ಎತ್ತರಿಸಿದಾಗ ಮುಳುಗಡೆಯಾಗುತ್ತಿದ್ದು, ಸದರಿ ರಾಜ್ಯ ಹೆದ್ದಾರಿ ಬೆಳಗಾವದಿಂದ ಬಿಜಾಪುರ, ಗುಲ್ಬರ್ಗಾ, ಬೀದರ, ಹೈದ್ರಾಬಾದ್ ತಲುಪುವ ಪ್ರಮುಖ ರಸ್ತೆಯಾಗಿದ್ದು ಈಗಿರುವ ಸೇತುವೆಯನ್ನು ಎತ್ತರಿಸುವ ಅಥವಾ ಹೊಸ ಸೇತುವೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹೊಸ ಸೇತುವೆ ನಿರ್ಮಿಸುವುದಿದ್ದರೆ, ಅದರ ಅಂದಾಜು ವೆಚ್ಚ ಎಷ್ಟು (ಅದರ ಕಾರ್ಯ ಯಾವ ಮಟ್ಟದಲ್ಲಿದೆ ವಿವರಣೆ ನೀಡುವುದು) ?

## ಕೆರೆಗಳ ಅಭಿವೃದ್ಧಿ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೨೬ (೨೧೬೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು (ಪ್ರತಿ ತಾಲ್ಲೂಕುವಾರು ವಿವರಣೆ ನೀಡುವುದು) ;

(ಆ) ಅವುಗಳಲ್ಲಿ ಕೃಷ್ಣಾ ನದಿಯಿಂದ ಕೆರೆ ತುಂಬುವ ಯೋಜನೆಯಡಿ ಯಾವ ಯಾವ ತಾಲ್ಲೂಕಿನ ಎಷ್ಟು ಕೆರೆಗಳನ್ನು ತುಂಬಲಾಗುತ್ತಿದೆ ;

(ಇ) ಅವಳಿ ಜಿಲ್ಲೆಗಳಲ್ಲಿರುವ ಒಟ್ಟು ಎಷ್ಟು ಕೆರೆಗಳು ಹೂಳೆತ್ತುವ ಕಾರ್ಯಕ್ರಮಕ್ಕೆ ಒಳಪಟ್ಟಿದೆ (ಪ್ರತಿ ಕೆರೆಗಳಿಗೆ ಮಂಜೂರಾದ ಹಣ ಮತ್ತು ಖರ್ಚಾಗಿರುವ ಹಣದ ಕುರಿತು ತಾಲ್ಲೂಕುವಾರು ವಿವರಣೆ ನೀಡುವುದು) ?

**ಜಮಖಂಡಿ ನಗರ ಪ್ರದೇಶಕ್ಕೆ ಒಳಪಟ್ಟ ಕೆರೆಗಳು**

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೨೭ (೨೨೦೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜಮಖಂಡಿ ನಗರ ಪ್ರದೇಶದಲ್ಲಿರುವ ಕೆಟ್ಟೆ ಕೆರೆ (ಮುಧೋಳ ರಸ್ತೆಯಲ್ಲಿರುವ)ಯ ಹೂಳೆತ್ತುವ ಕಾರ್ಯ ಮತ್ತು ಕೆರೆ ಸುತ್ತಲು ರಸ್ತೆ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಲ್ಲಲು ಕಾರಣವೇನು ಮತ್ತು ಸದರಿ ಕೆರೆಯ ಅಭಿವೃದ್ಧಿಗೆ ಮಂಜೂರಾದ ಹಣವೆಷ್ಟು ; ಅದರಲ್ಲಿ ನೈಜವಾಗಿ ಖರ್ಚಾದ ಹಣವೆಷ್ಟು ;

(ಆ) ಜಮಖಂಡಿ ನಗರ ಮಧ್ಯದಲ್ಲಿರುವ "ಮಹಾರಾಜರು ನಿರ್ಮಿಸಿದ ಸುಂದರವಾದ ವರ್ತುಲ ಕಟ್ಟಡ ಇರುವ ಲಕ್ಕಣ ಕೆರೆ" ಯನ್ನು ಪ್ರವಾಸಿ ಸ್ಥಾನವಾಗಿ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಅಲ್ಲಿ ವಿದ್ಯುತ್ ದೀಪ ಮತ್ತು ಬೋಟ್ ವ್ಯವಸ್ಥೆ ಮಾಡಲಾಗುವುದೇ ;

(ಇ) ಜಮಖಂಡಿ ನಗರದಲ್ಲಿರುವ ಇನ್ನೊಂದು ಕೆರೆ "ಮಾದಪ್ಪನ ಕೆರೆ" (ಕುಂಬಾರ ಕೆರೆ) ಹೂಳು ತುಂಬಿ ನಗರದ ಗಟಾರು ನೀರು ಹರಿದು ಗಿಡಗಂಟೆಗಳು ಬೆಳೆದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿರುವುದು ಸರ್ಕಾರ ಗಮನಿಸಿದೆಯೇ; ಗಮನಿಸಿದ್ದರೆ, ಅದಕ್ಕೆ ಏನು ಕ್ರಮ ಜರುಗಿಸಲಾಗುವುದು ?

## ಹಳ್ಳ್ಯಾಳ ಏತ ನೀರಾವರಿ ಕಾಲುವೆಗೆ ಮೋಟಾರ್ ಜೋಡಿಸುವುದು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೨೮ (೨೨೦೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) "ಅಥಣಿ ತಾಲ್ಲೂಕಿನ ಹಳ್ಳ್ಯಾಳ ಏತ ನೀರಾವರಿ (ಕರಿಮಸೂತಿ)ಯ ಎರಡನೇ ಹಂತದಲ್ಲಿ ಅಂದರೆ ಜಮಖಂಡಿ ತಾಲ್ಲೂಕಿನ ತುಂಗಳ, ಸಾವಳಗಿ ಭಾಗದ ಜಮೀನುಗಳಿಗೆ ನೀರು ಪೂರೈಸುವ ಕಾಲುವೆಗೆ ನೀರೆತ್ತಲು ಅಳವಡಿಸಬೇಕಾಗಿರುವ ವಿದ್ಯುತ್ ಮೋಟಾರುಗಳ ಕಾರ್ಯ ವಿಳಂಬವಾಗಲು ಕಾರಣವೇನು ; ವಿಳಂಬದಿಂದ ಆ ಭಾಗದ ರೈತರಿಗೆ ತೊಂದರೆ ಆಗುವುದಿಲ್ಲವೇ ;

(ಆ) ಆದಷ್ಟುಬೇಗನೆ ಮೋಟಾರುಗಳ ಜೋಡಣೆ ಮಾಡಿ ಈ ಋತುಮಾನದಲ್ಲಿ ಆ ಭಾಗದ ರೈತರಿಗೆ ನೀರು ಒದಗಿಸಲಾಗುವುದೇ (ವಿವರಣೆ ನೀಡುವುದು) ?

## ಸ್ಮಶಾನದ ಜಮೀನು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೭೨೯ (೨೧೬೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಭೂಮಿಯನ್ನು ಸ್ಮಶಾನಕ್ಕಾಗಿ ಪರಿವರ್ತಿಸಲು ಇರುವ ನಿಯಮಾವಳಿಗಳೇನು ;

(ಆ) ಬಿಜಾಪುರ ಜಿಲ್ಲೆಯ ಸಿಂದಗಿ ನಗರದಲ್ಲಿ ಸ್ಮಶಾನದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಿಂದಗಿಯ ವೀರಶೈವ ಅಭಿವೃದ್ಧಿ ಸಂಘ ತೋಟಗಾರಿಕೆ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಿ ಅನುಮತಿಯನ್ನು ಪಡೆದಿದ್ದು, ಆದರೆ ಈಗ ಆ ೦೫ ಎಕರೆ ಜಮೀನನ್ನು ಸ್ಮಶಾನಕ್ಕೆ ಒದಗಿಸಲು ಉದ್ದೇಶಿಸಿ ಪ್ರಸ್ತಾವನೆ ಸಲ್ಲಿಸಿದರೂ ಪರಿವರ್ತನೆಗಾಗಿ ಪರಿಗಣಿಸದೆ ಇರಲು ತೊಂದರೆ ಏನು ;

(ಈ) ಸ್ಮಶಾನಕ್ಕೆ ಈ ಜಮೀನನ್ನು ಒದಗಿಸಲು ಸರ್ಕಾರ ತೀರ್ಮಾನ ಕೈಗೊಳ್ಳುವುದೇ ?

## ಆಲಿಕಲ್ಲು ಮಳೆಯಿಂದ ಹಾನಿಗೆ ಒಳಗಾದ ರೈತರಿಗೆ ಪರಿಹಾರ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೭೩೦ (೨೧೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಿಂದ ಹಾನಿಗೆ ಒಳಗಾದ ತೋಟಗಾರಿಕೆ ಹಾಗೂ ಕೃಷಿ ರೈತರಿಗೆ ಪರಿಹಾರ ನೀಡುವ ಕಾರ್ಯ ಪೂರ್ಣಗೊಂಡಿದೆಯೇ ;

(ಆ) ಜಿಲ್ಲಾವಾರು, ತಾಲ್ಲೂಕುವಾರು ಯಾವ ಯಾವ ರೈತರಿಗೆ ಪ್ರತಿ ಎಕರೆಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ ಮತ್ತು ನೀಡಬೇಕಾಗಿದೆ (ಪ್ರತಿಯೊಬ್ಬರ ವಿವರ ನೀಡುವುದು) ?

## ಎನ್.ಸಿ.ವಿ.ಟಿ ಮತ್ತು ಎಸ್.ಸಿ.ವಿ.ಟಿ.ಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) :-**

೧೭೩೧ (೨೧೭೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಎನ್.ಸಿ.ವಿ.ಟಿ ಮತ್ತು ಎಸ್.ಸಿ.ವಿ.ಟಿ ನಡುವೆ ಇರುವ ವ್ಯತ್ಯಾಸವೇನು ;

(ಆ) ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎನ್.ಸಿ.ವಿ.ಟಿ ಮತ್ತು ಎಸ್.ಸಿ.ವಿ.ಟಿ ಸಂಯೋಜನೆಗೆ ಒಳಗೊಂಡಿರುತ್ತವೆ (ಟ್ರೇಡ್‌ವಾರು ವಿವರಗಳನ್ನು ನೀಡುವುದು) ;

(ಇ) ಪ್ರತಿ ವರ್ಷ ಎನ್.ಸಿ.ವಿ.ಟಿ ಅಡಿಯಲ್ಲಿ ವಿದ್ಯಾರ್ಥಿಗಳ ಪ್ರವೇಶ ಪಟ್ಟಿಯನ್ನು ಅನುಮೋದಿಸುವ ವೇಳೆ, ಯಾವ ದಿನಾಂಕ ಮತ್ತು ತಿಂಗಳು ತಿಳಿಸುವುದು ;

(ಈ) ಇದುವರೆಗೂ ಎನ್.ಸಿ.ವಿ.ಟಿ ಅಡಿಯಲ್ಲಿ ಪ್ರವೇಶ ಪಟ್ಟಿಯನ್ನು ಅನುಮೋದಿಸದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ ಕಾರಣವೇನು; ಈ ಕುರಿತು ಯಾವ ಕ್ರಮ ತೆಗೆದುಕೊಂಡಿವೆ ವಿವರ ನೀಡುವುದು ;

(ಊ) ಇದುವರೆಗೂ ಎನ್.ಸಿ.ವಿ.ಟಿ ಅಡಿಯಲ್ಲಿ ವಿದ್ಯಾರ್ಥಿಗಳ ಪ್ರವೇಶ ಪಟ್ಟಿಯನ್ನು ಅನುಮೋದನೆ ನೀಡದೇ ಇರುವುದರಿಂದ

ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುವ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ ?

## ಎಸ್.ಸಿ.ವಿ.ಟಿ ಪರೀಕ್ಷೆಗಳ ಫಲಿತಾಂಶಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) :-**

೧೭೩೨ (೨೧೭೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩ ಡಿಸೆಂಬರ್ ತಿಂಗಳಲ್ಲಿ ನಡೆಸಲಾದ ಎಸ್.ಸಿ.ವಿ.ಟಿ ಪರೀಕ್ಷೆ ಫಲಿತಾಂಶವನ್ನು ಯಾವಾಗ ಪ್ರಕಟಿಸಲಾಗಿದೆ ;

(ಆ) ಈ ಪರೀಕ್ಷೆಗೆ ಎಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು; ಎಷ್ಟು ವಿದ್ಯಾರ್ಥಿಗಳು ಉತ್ತೀರ್ಣ ಹಾಗೂ ಅನುತ್ತೀರ್ಣರಾಗಿದ್ದಾರೆ (ವಿವರಗಳನ್ನು ನೀಡುವುದು)

(ಇ) ಈ ಪರೀಕ್ಷೆಯಲ್ಲಿ ಹಾಜರಾದ ವಿದ್ಯಾರ್ಥಿಗಳಲ್ಲಿ ೨೦೦೦ ವಿದ್ಯಾರ್ಥಿಗಳ ಫಲತಾಂಶವನ್ನು ಪ್ರಕಟಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಕಟಿಸದೇ ಇರುವುದಕ್ಕೆ ಕಾರಣವೇನು ;

(ಈ) ಈ ಕಾರಣದಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದು ನಿಜವೇ ;

(ಉ) ಹಾಗಿದ್ದರೆ, ಇದಕ್ಕೆ ಕಾರಣವಾದ ಅಧಿಕಾರಿಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ (ದಾಖಲೆಗಳೊಂದಿಗೆ ವಿವರ ನೀಡುವುದು) ?

## ಅರಣ್ಯ ನಾಶ: ಮಲೆನಾಡು ಪ್ರದೇಶದ ಜನತೆಗೆ ತೊಂದರೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೧೭೩೩ (೨೧೭೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಗಾಡಿಗಲ್ ಮತ್ತು ಕಸ್ತೂರಿ ರಂಗನ್ ಸಮಿತಿಗಳ ವರದಿಯನ್ನು ಅನುಷ್ಠಾನ ಮಾಡುವ ಬಗ್ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ತನ್ನ ಬದ್ಧತೆ ವ್ಯಕ್ತಪಡಿಸಿದೆಯೇ ;

(ಆ) ಈ ವರದಿಗಳು ಅನುಷ್ಠಾನವಾಗುವುದರಿಂದ ನೂರಾರು ವರ್ಷ ಅರಣ್ಯದ ಅಂಚಿನಲ್ಲಿರುವವರ ಬದುಕು ಸಂಕಷ್ಟಕೀಡಾಗುವುದಿಲ್ಲವೇ ;

(ಇ) ಮಲೆನಾಡು ಪ್ರದೇಶಗಳಲ್ಲಿ ಪ್ರಗತಿ ಕಾರ್ಯಗಳ ಅಂದರೆ ವಸತಿ, ವಿದ್ಯುತ್ ವಿತರಣೆ ಹಾಗೂ ಸಣ್ಣ ಕೈಗಾರಿಕೆಗಳಿಗೆ ಈ ವರದಿಯಿಂದ ಆಗುವ ತೊಂದರೆಗಳೇನು; ಮಲೆನಾಡು ಪ್ರದೇಶದ ಜನರ ಭಾವನೆಗಳನ್ನು ಸರ್ಕಾರವು ಗಮನಿಸಿದೆಯೇ ;

(ಈ) ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವು ಮಲೆನಾಡು ಪ್ರದೇಶದ ಜನರ ಮಧ್ಯೆ ಉತ್ತಮ ಸಂಬಂಧವನ್ನು ಬೆಳೆಸಲು ( ಈ ವರದಿ ಕುರಿತಂತೆ) ಕೈಗೊಂಡ ಕ್ರಮವೇನು ?

## ನೀರಾವರಿ ಯೋಜನೆಗಳು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೧೭೩೪ (೨೧೭೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟಿರುವ ಒಟ್ಟು ಜಮೀನು ಎಷ್ಟು;

(ಆ) ಇದರಲ್ಲಿ ಬೃಹತ್, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶವೆಷ್ಟು (ಪ್ರತ್ಯೇಕ ವಿವರ ನೀಡುವುದು) ;

(ಇ) ಮಳೆಯಾಧಾರಿತ ಕೃಷಿ ಭೂಮಿ ಎಷ್ಟು; ನೀರಾವರಿ ಯೋಜನೆಗೆ ನಿರ್ಮಿಸಿರುವ ಬೃಹತ್ ಅಣೆಕಟ್ಟುಗಳೆಷ್ಟು ; ಅವು ಯಾವುವು; ಈ ಅಣೆಕಟ್ಟಿನಿಂದ ಎಷ್ಟು ಪ್ರದೇಶಕ್ಕೆ ನೀರುಣಿಸಲಾಗುತ್ತಿದೆ ;

(ಈ) ಅಪೂರ್ಣವಾಗಿರುವ ಬೃಹತ್, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳಾವುವು; ಯೋಜನೆಯ ಅಂದಾಜು ವೆಚ್ಚವೆಷ್ಟು ; ಖರ್ಚಾಗಿರುವ ಮೊತ್ತವೆಷ್ಟು ; ಈ ವಿಳಂಬ ಧೋರಣೆಗೆ ಕಾರಣಗಳೇನು ?

## ಬಾಲ ಕಾರ್ಮಿಕರ ಪುನರ್ವಸತಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೩೫ (೨೧೮೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ೨೦೧೨-೧೩ ರಿಂದ ಪ್ರಸಕ್ತ ಸಾಲಿನವರೆಗೂ ಪತ್ತೆ ಮಾಡಲಾದ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) ;

(ಆ) ಪತ್ತೆ ಮಾಡಲಾದ ಬಾಲ ಕಾರ್ಮಿಕರಿಗೆ ಪುನರ್ವಸತಿಗಾಗಿ ಯಾವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ (ವಿವರಗಳನ್ನು ನೀಡುವುದು) ;

(ಇ) ಪುನರ್ವಸತಿ ಕಲ್ಪಿಸದೇ ಇರುವಂತಹ ಪ್ರಕರಣಗಳೇನಾದರೂ ಇವೆಯೇ; ಇದ್ದಲ್ಲಿ ಕಾರಣಗಳೇನು ;

(ಈ) ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಕಟ್ಟಡ ಕಾರ್ಮಿಕರ ನೋಂದಣಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೩೬ (೨೧೮೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ ಕಾರ್ಯ ಸದ್ಯ ಯಾವ ಹಂತದಲ್ಲಿದೆ ;

(ಆ) ಜಿಲ್ಲಾವಾರು ಕಟ್ಟಡ ಕಾರ್ಮಿಕರ ನೋಂದಣಿಯಲ್ಲಿ ಸಾಧಿಸಿದ ಪ್ರಗತಿ ಏನು ;

(ಇ) ಸದರಿ ಯೋಜನೆಯ ಮುಖ್ಯ ಉದ್ದೇಶವೇನು; ಇದರಿಂದ ಸದರಿ ಕಟ್ಟಡ ಕಾರ್ಮಿಕರ ಭವಿಷ್ಯಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಈ) ಕಟ್ಟಡ ಕಾರ್ಮಿಕರ ನೋಂದಣಿಗಾಗಿ ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ (ವಿವರಗಳನ್ನು ನೀಡುವುದು) ?

## ಉಪ ವಲಯ ಅರಣ್ಯಾಧಿಕಾರಿಗಳಿಗೆ ಮುಂಬಡ್ತಿ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೩೭ (೨೧೫೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ವಲಯ ಅರಣ್ಯಾಧಿಕಾರಿಗಳ ವೇತನ ಶ್ರೇಣಿ ೧೨೫೦೦- ೨೪೦೦೦ ರಿಂದ ೨೦೦೦೦-೩೬೩೦೦ಕ್ಕೆ ಹೆಚ್ಚಳ

ಮಾಡಲು ಸರ್ಕಾರ ವಿಳಂಬಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಸ್ತಾವನೆಯನ್ನು ಮಂಜೂರು ಮಾಡುವುದು ಯಾವಾಗ ;

(ಆ) ಹಾಗಿದ್ದಲ್ಲಿ, ಉಪ ವಲಯ ಅರಣ್ಯ ಅಧಿಕಾರಿಗಳ ಕರ್ತವ್ಯಗಳು ಆರಕ್ಷಕ ಉಪ ನಿರೀಕ್ಷಕರ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಗಳಿಗಿಂತ ಹೆಚ್ಚಿನ ಒತ್ತಡದ ಕರ್ತವ್ಯವಾಗಿದೆ ಎಂಬುದನ್ನು ಸರ್ಕಾರ ಗಮನಿಸಿದೆಯೇ ;

(ಇ) ರಾಜ್ಯದಲ್ಲಿ ಎಷ್ಟು ಉಪ ವಲಯ ಅರಣ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿವೆ; ಹಾಗೇ ಎಷ್ಟು ಹುದ್ದೆಗಳು ಖಾಲಿ ಇವೆ; ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ;

(ಈ) ಅರಣ್ಯ ಇಲಾಖೆಯ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ಯಾವ ಕ್ರಮ ತೆಗೆದುಕೊಳ್ಳಲಾಗುತ್ತಿದೆ ; ಈ ಪ್ರಕ್ರಿಯೆಯು ಯಾವಾಗ ಪೂರ್ಣಗೊಳ್ಳಲಾಗುವುದು (ಮಾಹಿತಿ ನೀಡುವುದು) ?

## ಜಲಾಶಯಗಳಲ್ಲಿ ಸಂಗ್ರಹವಾದ ಹೂಳು

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೩೮ (೨೧೮೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಸೇರಿದ ಜಲಾಶಯಗಳು ಎಲ್ಲೆಲ್ಲಿವೆ (ಹೆಸರು ಮತ್ತು ಆಳ/ಸುತ್ತಳತೆಯ ಪೂರ್ಣ ವಿವರ ನೀಡುವುದು) ;

(ಆ) ಈ ಅಣೆಕಟ್ಟುಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಇವುಗಳ ನೀರು ಸಂಗ್ರಹದ ಸಾಮರ್ಥ್ಯವೆಷ್ಟಿತ್ತು ; ಈಗ ಎಷ್ಟಿದೆ ;

ಜಲಾಶಯದಲ್ಲಿ ತುಂಬಿರುವ ಹೂಳಿನ ಪ್ರಮಾಣವೆಷ್ಟು (ಪ್ರತಿ ಜಲಾಶಯವಾರು ವಿವರಗಳನ್ನು ನೀಡುವುದು) ;

(ಇ) ರಾಜ್ಯದ ಎಲ್ಲಾ ಜಲಾಶಯಗಳಲ್ಲಿ ಅಪಾರ ಪ್ರಮಾಣದ ಹೂಳು ತುಂಬಿರುವುದರಿಂದ ನೀರಿನ ಸಂಗ್ರಹ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಜಲಾಶಯಗಳಲ್ಲಿ ಸಂಗ್ರಹವಾದ ಹೂಳನ್ನು ಎತ್ತಲು ಸರ್ಕಾರ ಯೋಜನೆಯನ್ನೇನಾದರೂ ರೂಪಿಸಿದೆಯೇ; ಹೂಳನ್ನು ಎತ್ತಲು ಅಗತ್ಯವಿರುವ ಹಣದ ಮೊತ್ತವೆಷ್ಟು (ಮಾಹಿತಿ ನೀಡುವುದು) ;

(ಉ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಜಲಾಶಯಗಳ ನಿರ್ವಹಣೆ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಂಡಿದ್ದಕ್ಕೆ ಪ್ರತಿ ವರ್ಷ ವೆಚ್ಚ ಮಾಡಿರುವ ಹಣವೆಷ್ಟು ; ಸದರಿ ಅವಧಿಯಲ್ಲಿ ಕೇಂದ್ರ/ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ಬಂದಿರುವ ಹಣವೆಷ್ಟು (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು) ?

## ಪ್ರಾದೇಶಿಕ ಅರಣ್ಯ ವಲಯದಲ್ಲಿ ನಡೆದಿರುವ ಅಕ್ರಮಗಳು

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೩೯ (೨೧೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಕಲೇಶಪುರ ಪ್ರಾದೇಶಿಕ ಅರಣ್ಯ ವಲಯದಲ್ಲಿ ವಲಯಾರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಮೇಲೆ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳ

ಜಮೀನುಗಳಲ್ಲಿ ಸಾಮಾಜಿಕ ಭದ್ರತಾ ನೆಡುತೋಪುಗಳನ್ನು ಬೆಳೆಸಿಕೊಡುವುದರಲ್ಲಿ ವಿಫಲರಾಗಿ ೬.೩೪ ಲಕ್ಷ ರೂ.ಗಳನ್ನು ದುರುಪಯೋಗಪಡಿಸಿಕೊಂಡಿರುವುದು ನಿಜವಲ್ಲವೇ ;

(ಆ) ಹಾಗಿದ್ದಲ್ಲಿ, ಈ ಅಧಿಕಾರಿಯ ಮೇಲೆ ದಿ: ३೦.೦೮.೨೦೧३ ರಿಂದ ೧೫.೦३.೨೦೧೪ ರವರೆವಿಗೆ ಯಾವ ಯಾವ ಪ್ರಕರಣಗಳಿಗೆ ಎಷ್ಟು ಬಾರಿ ಕಾರಣ ಕೇಳಿ ನೋಟೀಸ್ ಮತ್ತು ಜ್ಞಾಪನಾ ಪತ್ರಗಳನ್ನು ನೀಡಲಾಗಿದೆ (ಎಲ್ಲಾ ಪ್ರಕರಣಗಳ ಪೂರ್ಣ ವಿವರಗಳನ್ನು ಒದಗಿಸುವುದು) ;

(ಇ) ಈ ಅಧಿಕಾರಿಯು ಮೇಲ್ಕಂಡ ಯೋಜನೆಯ ಹಾಗೂ ಇತರೆ ಅಕ್ರಮಗಳಲ್ಲಿ ಭಾಗಿಯಾಗಿ ಹಣ ದುರುಪಯೋಗ ಪ್ರಕರಣದ ಬಗ್ಗೆ ಈಗಾಗಲೇ ಸಕಲೇಶಪುರ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪತ್ರದ ಸಂಖ್ಯೆ: ಸಿಬ್ಬಂದಿ/ಸಿಆರ್/೨೪/ ೧३-೧೪/೧೮೨೨, ದಿ: ೧೫/೦३/೨೦೧೪) ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದು, ಇದರ ಮೇಲೆ ಸಂಬಂಧಪಟ್ಟ ಆರ್.ಎಫ್.ಓ ಮೇಲೆ ಇಲ್ಲಿಯವರೆವಿಗೆ ಯಾವ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ;

(ಈ) ಒಂದು ವೇಳೆ ಮೇಲ್ಕಂಡ ಪ್ರಕರಣದಲ್ಲಿ ಗಂಭೀರವಾದ ಆರೋಪಗಳನ್ನು ಎದುರಿಸುತ್ತಿದ್ದರೂ ಸದರಿ ಆರ್.ಎಫ್.ಓ ಮೇಲೆ ಇಲ್ಲಿಯವರೆವಿಗೂ ಯಾವುದೇ ಶಿಸ್ತಿನ ಕ್ರಮಗಳನ್ನು ಕೈಗೊಳ್ಳದೇ ಇರುವುದಕ್ಕೆ ಕಾರಣಗಳೇನು ;

(ಉ) ಸಾರ್ವಜನಿಕ ಮತ್ತು ಆಡಳಿತದ ಹಿತದೃಷ್ಟಿಯಿಂದ ಹಲವಾರು ಗಂಭೀರವಾದ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರ್.ಎಫ್.ಓ. ಮೇಲೆ ಸರ್ಕಾರ ಈಗಲಾದರೂ ಶಿಸ್ತಿನ ಕ್ರಮಗಳನ್ನು ಕೈಗೊಳ್ಳುವುದೇ?

## ನಗರ ಹಸಿರೀಕರಣ ಯೋಜನೆಯಲ್ಲಿ ಅಕ್ರಮಗಳು

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೪೦ (೨೧೮೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಕಲೇಶಪುರ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯಲ್ಲಿ ೨೦೧೩-೧೪ನೇ ಸಾಲಿನಲ್ಲಿ ನಗರ ಹಸಿರೀಕರಣ ಯೋಜನೆಯಡಿಯಲ್ಲಿ ೧೦ ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಕಾಮಗಾರಿಯು ಅಂದಿನ ವಾರ್ಷಿಕ ಕ್ರಿಯಾ ಯೋಜನೆಗೆ ಸೇರಿದೆಯೇ; ಸೇರಿದ್ದಲ್ಲಿ. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆಯೇ ;

(ಆ) ಅನುಷ್ಠಾನಗೊಳಿಸಿದ್ದಲ್ಲಿ, ಇದಕ್ಕೆ ವೆಚ್ಚವಾಗಿರುವ ಮೊತ್ತವೆಷ್ಟು; ಈ ಕಾಮಗಾರಿಯು ಉತ್ತಮ ಗುಣಮಟ್ಟದಲ್ಲಿದೆಯೇ ;

(ಇ) ಈ ಕಾಮಗಾರಿಯ ಅನುಷ್ಠಾನ ಸಂದರ್ಭದಲ್ಲಿ ೫.೩೩ ಲಕ್ಷ ರೂಗಳನ್ನು ವೃಥಾ ವ್ಯಯಿಸಿರುವ ಬಗ್ಗೆ ಸಂಬಂಧಪಟ್ಟ ಆರ್.ಎಫ್.ಓ ಮೇಲೆ ಹಣವನ್ನು ವಸೂಲಿ ಮಾಡಬೇಕೆಂದು ಹಾಗೂ ಶಿಸ್ತಿನ ಕ್ರಮ ಜರುಗಿಸಬೇಕೆಂದು ದಿನಾಂಕ: ೩೧.೧೦.೨೦೧೩ರಲ್ಲಿ ಈ ಉಪ ವಿಭಾಗದ ಎ.ಸಿ.ಎಫ್ ರವರು ಹಾಸನದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ವರದಿ ನೀಡಿರುವುದು ನಿಜವಲ್ಲವೇ ; ಹಾಗಿದ್ದಲ್ಲಿ ಈ ವರದಿಯ ಮುಖ್ಯಾಂಶಗಳೇನು; ಈ ವರದಿ ಆಧಾರದ ಮೇಲೆ ಸಂಬಂಧಪಟ್ಟ ಆರ್.ಎಫ್.ಓ. ಮೇಲೆ ಸರ್ಕಾರ ಇಲ್ಲಿಯವರೆವಿಗೆ ಯಾವ ಶಿಸ್ತಿನ

ಕ್ರಮಗಳನ್ನು ತೆಗೆದುಕೊಂಡಿದೆ; ಒಂದು ವೇಳೆ ಇಲ್ಲಿಯವರೆವಿಗೂ ಈ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ, ಅದಕ್ಕೆ ಕಾರಣಗಳೇನು ;

(ಈ) ಸದರಿ ಹಣ ದುರುಪಯೋಗದ ಪ್ರಕರಣವು ಗಂಭೀರ ವಾಗಿರುವುದರಿಂದ ಹಾಗೂ ಇವರ ಮೇಲೆ ಈಗಾಗಲೇ ಮೇಲಧಿಕಾರಿಗಳು ಶಿಸ್ತಿನ ಕ್ರಮ ಜರುಗಿಸುವಂತೆ ವರದಿ ಸಲ್ಲಿಸಿದ್ದರೂ ಸಹ ಮೇಲಧಿಕಾರಿಗಳು ಈ ವರದಿಯನ್ನು ಮುಚ್ಚಿಡಲು ಕಾರಣಗಳೇನು; ಈಗಲಾದರೂ ಸರ್ಕಾರ ಈ ವರದಿಯ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮವನ್ನು ಕೈಗೊಳ್ಳುವುದೇ ?

## ಅರಣ್ಯ ವಲಯದಲ್ಲಿ ಅರಣ್ಯ ಕಾಯ್ದೆಯ ಉಲ್ಲಂಘನೆ

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತ ರಾದವರು) :-**

೧೭೪೧ (೨೧೮೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಕಲೇಶಪುರ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯಲ್ಲಿ ಬರುವ ಕಡಗರವಳ್ಳಿ ಡೀಮ್ಡ್ ಫಾರೆಸ್ಟ್ ಸರ್ವೆ ನಂ. ೯೯ ರಲ್ಲಿ ಅಕ್ರಮ ಕಡಿತಲೆ ಹಾಗೂ ಅನಧಿಕೃತ ರಸ್ತೆ ನಿರ್ಮಾಣ ಆಗಿರುವುದು ನಿಜವಲ್ಲವೇ ;

(ಆ) ಹಾಗಿದ್ದಲ್ಲಿ, ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಹೆಸರು, ವಿವರಗಳೇನು; ಇವರುಗಳ ಮೇಲೆ ಇಲ್ಲಿಯವರೆವಿಗೆ ಕೈಗೊಂಡಿರುವ ಶಿಸ್ತಿನ ಕ್ರಮಗಳೇನು ;

(ಇ) ಅರಣ್ಯ ಸಂರಕ್ಷಣಾ ಕಾಯ್ದೆ ಸೆಕ್ಷನ್ ೨ರಲ್ಲಿರುವ ನಿಯಮಗಳ ಮೇಲ್ಕಂಡ ಅಕ್ರಮಗಳು ಪತ್ತೆಯಾದಾಗ ಯಾವ ರೀತಿಯ ಕ್ರಮಗಳನ್ನು ಯಾವ ಯಾವ ಅಧಿಕಾರಿಗಳ ಮೇಲೆ ತೆಗೆದುಕೊಳ್ಳಬೇಕೆಂಬ ನಿಯಮವಿದೆ ; ಈ ಮೇಲ್ಕಂಡ ಪ್ರಕರಣದಲ್ಲಿ ಸದರಿ ನಿಯಮದ ಅನ್ವಯ ಯಾವ ಯಾವ ಅಧಿಕಾರಿಗಳ ಮೇಲೆ ಇಲ್ಲಿಯವರೆವಿಗೆ ಯಾವ ಯಾವ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು) ;

(ಈ) ಮೇಲ್ಕಂಡ ಪ್ರಕರಣದಲ್ಲಿ ಆರ್.ಎಫ್.ಓ.ಎ.ಸಿ.ಎಫ್. ಮತ್ತು ಹಾಸನ ವಿಭಾಗದ ಡಿ.ಎಫ್.ಓ.ಸಿ.ಸಿ.ಎಫ್ ಇವರ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ; ಇವರುಗಳನ್ನು ಮೇಲ್ಕಂಡ ಪ್ರಕರಣಗಳಲ್ಲಿ ಇಲ್ಲಿಯವರೆವಿಗೆ ಹೊಣೆಗಾರರನ್ನಾಗಿ ಮಾಡದೇ ಇರುವುದಕ್ಕೆ ಕಾರಣಗಳೇನು ;

(ಉ) ಈ ಪ್ರಕರಣದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಸೆಕ್ಷನ್ ೨ರ ಸ್ಪಷ್ಟ ಉಲ್ಲಂಘನೆಯಾಗಿರುವುದು ಸರ್ಕಾರಕ್ಕೆ ತಿಳಿದಿದ್ದರೂ ಸಹ ಸಂಬಂಧಪಟ್ಟ ಹಿರಿಯ ಅಧಿಕಾರಿಗಳನ್ನು ಶಿಕ್ಷಿಸದೇ ರಕ್ಷಣೆ ಮಾಡುತ್ತಿರುವುದಕ್ಕೆ ಕಾರಣಗಳೇನು ; ಸರ್ಕಾರ ಈಗಲಾದರೂ ಈ ಅಧಿಕಾರಿಗಳನ್ನು ಸದರಿ ಪ್ರಕರಣದಲ್ಲಿ ಜವಾಬ್ದಾರಿಯುತರನ್ನಾಗಿ ಮಾಡಿ ಇವರುಗಳ ಮೇಲೆ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳುವುದೇ ?

## ನಾಗೇಗೌಡನ ಬ್ಯಾಲ ಗ್ರಾಮದ ಸರ್ವೆ ನಂ. ೧ ರಲ್ಲಿ ಹಾದುಹೋಗಿರುವ ನಾಲೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೭೪೨ (೨೧೮೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ, ನಾಗೇಗೌಡನ ಬ್ಯಾಲದ ಸರ್ವೆ ನಂ. ೧ ರಲ್ಲಿ ಹಾದುಹೋಗಿರುವ ಕಾವೇರಿ ನೀರಾವರಿ ನಿಗಮದ ನಾಲೆ ಯಾವುದು ;

(ಆ) ಸದರಿ ಸರ್ವೆ ನಂ. ೧ರಲ್ಲಿ ಯಾವ ಹಿಸ್ಸೆ ನಂ. ಜಮೀನಿನಲ್ಲಿ ನಾಲೆ ಹಾದು ಹೋಗಿರುತ್ತದೆ (ಪೂರ್ಣ ವಿವರ ಕೊಡುವುದು) ;

(ಇ) ಹಾದು ಹೋಗಿರುವ ಹಿಸ್ಸೆಗಳಲ್ಲಿ ಭೂಸ್ವಾಧೀನವಾಗಿರುವ ನಂಬರ್‌ಗಳು, ರೈತರ ಹೆಸರುಗಳು, ವಿಸ್ತೀರ್ಣ ಹಾಗೂ ಮರಗಳು ಇತ್ಯಾದಿ ವಿವರ ನೀಡುವುದು ;

(ಈ) ಭೂಸ್ವಾಧೀನ ಮಾಡಿದ್ದು ಯಾವಾಗ; ರೈತರ ಜಮೀನಿಗೆ ಹಣ ನೀಡಿದ್ದು ಯಾವಾಗ ;

(ಉ) ಬಾಕಿ ಉಳಿದಿರುವ ಪ್ರಕರಣಗಳೆಷ್ಟು; ಹಣ ನೀಡಬೇಕಾದ ಪ್ರಕರಣಗಳೆಷ್ಟು ;

(ಊ) ನಾಲೆಯ ಕೆಲಸ ಸಂಪೂರ್ಣ ಮುಗಿದಿರುವುದೆ; ರೈತರಿಗೆ ನೀರು ಕೊಡಲಾಗಿದೆಯೇ (ಮಾಹಿತಿ ಒದಗಿಸುವುದು) ?

## ನಾಗೇಗೌಡನ ಬ್ಯಾಲ ಗ್ರಾಮದ ಜಮೀನು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೭೪೩ (೨೧೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ, ನಾಗೇಗೌಡನ ಬ್ಯಾಲ ಗ್ರಾಮದ ಸರ್ವೆ ನಂ. ೧ ರ ಜಮೀನು ಸ್ವಾತಂತ್ರ್ಯ ಪೂರ್ವ ಎಷ್ಟಿತ್ತು ; ಇದರಲ್ಲಿ ಖರಾಬು ಜಮೀನು ಎಷ್ಟು ;

(ಆ) ನಂತರ ಸರ್ವೆ ನಂ.೧ ಜಮೀನುಗಳನ್ನು ಭಾಗ ಮಾಡಲಾಗಿದೆಯೇ; ಎಷ್ಟು ಹಿಸ್ಸೆ ಮಾಡಲಾಗಿದೆ ; ಯಾರ್‍ಯಾರಿಗೆ ಮಂಜೂರು ಮಾಡಲಾಗಿದೆ (ವಿವರ ಕೊಡುವುದು) ;

(ಇ) ಮಂಜೂರು ಮಾಡಿದ ನಂತರ ಆಕಾರ್‌ಬಂದ್ ದುರಸ್ತು ಮಾಡಲಾಗಿದೆಯೇ ; ಆಕಾರ್ ಬಂದ್ ದುರಸ್ತು ಮಾಡಿದ್ದರೆ ಯಾವ್ಯಾವ ಜಮೀನಿಗೆ ಯಾವ ನಂಬರ್ ಕೊಡಲಾಗಿದೆ ;

(ಈ) ಸರ್ವೆ ನಂ. ೧ ರಲ್ಲಿ ಅರಣ್ಯ ಇಲಾಖೆಗೆ ನೀಡಲಾದ ಜಮೀನೆಷ್ಟು; ಯಾವಾಗ ನೀಡಲಾಯಿತು ;

(ಉ) ಸರ್ವೆ ನಂ. ೧ ರಲ್ಲಿ ಉಳಿದಿರುವ ಜಮೀನೆಷ್ಟು; ಉಳಿದಿರುವ ಖರಾಬು ವಿವರ ನೀಡುವುದು ;

(ಊ) ರೈತರ ಹೆಸರಿಗೆ ಖಾತೆ ಮಾಡಲಾಗಿದೆಯೇ; ಈಗ ರೈತರ ಜಮೀನು ಮಾರಾಟ ಮಾಡಲು ಸ್ಕೆಚ್, ಆಕಾರ್ ಬಂದ್ ಇಲ್ಲದೆ ತೊಂದರೆಯಾಗಿದ್ದು, ತುರ್ತು ಸರಿಪಡಿಸಲಾಗುವುದೇ ?

## ಹರಳಕೆರೆ ಇಟ್ಟಿಗೇಹಳ್ಳಿ ಗ್ರಾಮದ ಜಮೀನಿನ ನಾಲೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೭೪೪ (೨೧೮೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ, ವ್ಯಾಪ್ತಿಯ ಹರಳಕೆರೆ ಇಟ್ಟಿಗೇಹಳ್ಳಿ ಗ್ರಾಮಗಳ ಜಮೀನನ್ನು D-26ರR6 ಉಪವಿತರಣಾ ನಾಲೆಗೆ ಭೂಸ್ವಾಧೀನ ಮಾಡಲಾಗಿದೆಯೇ;

(ಆ) ಯಾವ ಸರ್ವೆ ನಂಬರಿನಲ್ಲಿ ಎಷ್ಟು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಇ) ರೈತರಿಗೆ ಇದರ ಬಗ್ಗೆ ಮಾಹಿತಿ ನೀಡಿ ಅವಾರ್ಡ್ ನೋಟಿಸ್ ನೀಡಲಾಗಿದೆಯೇ ;

(ಈ) ಆ ಜಮೀನಿನ ರೈತರಿಗೆ ಪರಿಹಾರ ನೀಡಲಾಗಿದೆಯೇ ;

(ಉ) ನಾಲೆಯ ಕಾಮಗಾರಿಯು ಯಾವ ಹಂತದಲ್ಲಿದೆ (ಪೂರ್ಣ ಮಾಹಿತಿಯನ್ನು ಒದಗಿಸುವುದು) ?

## ಅಜ್ಜನಹಳ್ಳಿ ಸರ್ವೆ ನಂ. ೨೦, ೨೧ರಲ್ಲಿ ಅಕ್ರಮ ಒತ್ತುವರಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೭೪೫ (೨೧೮೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ, ಅಜ್ಜನಹಳ್ಳಿ ಸರ್ವೆ ನಂ. ೨೦, ೨೧ ಅರಣ್ಯ ಇಲಾಖೆಗೆ ಸೇರಿರುತ್ತದೆಯೇ ;

(ಆ) ಹಾಗಿದ್ದಲ್ಲಿ, ಈ ನಂಬರಿನ ಜಾಗದಲ್ಲಿ ಸಾಮಾಜಿಕ ಅರಣ್ಯ ಇಲಾಖೆಯಿಂದ ಯಾವ ಗಿಡಮರಗಳನ್ನು ಎಷ್ಟು ವರ್ಷಗಳಿಂದ ಬೆಳೆಸಲಾಗಿದೆ ;

(ಇ) ಅರಣ್ಯ ಇಲಾಖೆ ಬೆಳೆಸಿರುವ ಮರಗಳನ್ನು ಇತ್ತೀಚಿನ ವರ್ಷಗಳಲ್ಲಿ ಅಕ್ರಮವಾಗಿ ಕಡಿದು, ಮಾರಿ, ಸ್ವಂತಕ್ಕೆ ಮಾಡಿಕೊಂಡಿರುವವರು ಯಾರು, ಎಷ್ಟು ಎಕರೆ, ಯಾವಾಗ ;

(ಈ) ಹಾಗಿದ್ದಲ್ಲಿ, ಇಲಾಖಾ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳೇನು ; ಇದರ ಬಗ್ಗೆ ಅನೇಕ ದೂರುಗಳು ಬಂದಿದ್ದರೂ ಕ್ರಮ ಕೈಗೊಂಡು ಒತ್ತುವರಿ ಜಮೀನು ಬಿಡಿಸಿ ಸರ್ಕಾರ ವಶಪಡಿಸಿಕೊಳ್ಳದಿರಲು ಕಾರಣಗಳೇನು ;

(ಉ) ಗ್ರಾಮಸ್ಥರ ಬೇಡಿಕೆಯಂತೆ ಕೂಡಲೇ ಕ್ರಮ ಕೈಗೊಂಡು ಜಮೀನು ವಶಪಡಿಸಿಕೊಳ್ಳಲಾಗುವುದೆ ?

## ಶಿಥಿಲಾವಸ್ಥೆಯಲ್ಲಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೪೬ (೨೨೦೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗಳಿಂದ ಇತ್ತೀಚಿನ ವರ್ಷಗಳಲ್ಲಿ ಪ್ರವಾಹ ಸಂದರ್ಭದಲ್ಲಿ ಮುಳುಗಡೆ ಆಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಚಿಕ್ಕೋಡಿ ತಾಲ್ಲೂಕಿನಲ್ಲಿ ಕಳೆದ ೦೫ ವರ್ಷದಿಂದ ಅಂದರೆ ಸನ್: ೨೦೦೯ ರಿಂದ ಇಲ್ಲಿಯವರೆಗೆ ನಿರ್ಮಿಸಿದ ಬ್ಯಾರೇಜ್‌ಗಳು ಎಷ್ಟು ; ಅವುಗಳ ಸಾಮರ್ಥ್ಯ ಎಷ್ಟು ; ಅವುಗಳನ್ನು ಯಾವ ಯಾವ ನದಿಗಳಿಗೆ ನಿರ್ಮಿಸಲಾಗಿದೆ ;

(ಇ) ಸದರಿ ಬ್ಯಾರೇಜ್‌ಗಳಿಂದ ಒಟ್ಟು ನೀರಾವರಿಗೆ ಒಳಪಡುವ ಕ್ಷೇತ್ರ ಎಷ್ಟು ;

(ಈ) ಅವುಗಳಿಗೆ ತಗುಲಿದ ವೆಚ್ಚ ಎಷ್ಟು ;

(ಉ) ನಿರ್ಮಾಣಗೊಂಡ ಬ್ಯಾರೇಜ್‌ಗಳಲ್ಲಿ ಶಿಥಿಲಾವಸ್ಥೆಯಲ್ಲಿ ಇರುವ ಬ್ಯಾರೇಜುಗಳು ಎಷ್ಟು; ಇವುಗಳನ್ನು ಪುನಃಶ್ಚೇತನಗೊಳಿಸಲು ಕೈಗೊಂಡ ಕ್ರಮಗಳೇನು ?

**ಚಿತ್ರಿ ಅಣೆಕಟ್ಟನ್ನು ಎತ್ತರಿಸುತ್ತಿರುವ ವಿಚಾರ**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೪೭ (೨೨೦೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಹಾರಾಷ್ಟ್ರ ರಾಜ್ಯದಲ್ಲಿ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ನಿರ್ಮಿಸಲ್ಪಟ್ಟಿರುವ ಚಿತ್ರಿ ಡ್ಯಾಮ್‌ನ್ನು ಎತ್ತರಿಸುವ ವಿಚಾರದಲ್ಲಿ ಮಹಾರಾಷ್ಟ್ರ ರಾಜ್ಯದ ನೀರಾವರಿ ಇಲಾಖೆ ಸಹಯೋಗದಲ್ಲಿ ಕಾಮಗಾರಿಯನ್ನು ಕರ್ನಾಟಕ-ಮಹಾರಾಷ್ಟ್ರ ಜಂಟಿ ಯೋಜನೆಯಾಗಿ ಕೈಗತ್ತಿಕೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಚಿತ್ರಿ ಡ್ಯಾಮ್ ಎತ್ತರಿಸುವ ವಿಚಾರದ ಬಗ್ಗೆ ಚರ್ಚೆ ಯಾವ ಹಂತದಲ್ಲಿದೆ ;

(ಇ) ಸದರಿ ಡ್ಯಾಮ್‌ನಿಂದ ಎಷ್ಟು ಟಿ.ಎಂ.ಸಿ. ನೀರು ನಮ್ಮ ರಾಜ್ಯಕ್ಕೆ ಒದಗಲಿದೆ ;

(ಈ) ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು ?

**ಶಿಥಿಲಾವಸ್ಥೆಯಲ್ಲಿರುವ ಸಣ್ಣ ನೀರಾವರಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳು**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೪೮ (೨೨೦೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗಳಿಂದ ಇತ್ತೀಚಿನ ವರ್ಷಗಳಲ್ಲಿ ಪ್ರವಾಹ ಸಂದರ್ಭದಲ್ಲಿ ಇವು ಮುಳುಗಡೆ ಆಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಚಿಕ್ಕೋಡಿ ತಾಲ್ಲೂಕಿನಲ್ಲಿ ಕಳೆದ ೦೫ ವರ್ಷದಿಂದ ಅಂದರೆ ಸನ್:೨೦೦೯ ರಿಂದ ಇಲ್ಲಿಯವರೆಗೆ ನಿರ್ಮಿಸಿದ ಬ್ಯಾರೇಜ್‌ಗಳು ಎಷ್ಟು ; ಅವುಗಳ ಸಾಮರ್ಥ್ಯ ಎಷ್ಟು; ಅವುಗಳನ್ನು ಯಾವ ಯಾವ ನದಿಗಳಿಗೆ ನಿರ್ಮಿಸಲಾಗಿದೆ ;

(ಇ) ಸದರಿ ಬ್ಯಾರೇಜ್‌ಗಳಿಂದ ಒಟ್ಟು ನೀರಾವರಿಗೆ ಒಳಪಡುವ ಕ್ಷೇತ್ರ ಎಷ್ಟು ;

(ಈ) ಅವುಗಳಿಗೆ ತಗುಲಿದ ವೆಚ್ಚ ಎಷ್ಟು ;

(ಉ) ನಿರ್ಮಾಣಗೊಂಡ ಬ್ಯಾರೇಜ್‌ಗಳಲ್ಲಿ ಶಿಥಿಲಾವಸ್ಥೆಯಲ್ಲಿ ಇರುವ ಬ್ಯಾರೇಜುಗಳು ಎಷ್ಟು ; ಇವುಗಳನ್ನು ಪುನಃಶ್ಚೇತನಗೊಳಿಸಲು ಕೈಗೊಂಡ ಕ್ರಮಗಳೇನು ?

## ಹಿಡಕಲ್ ಜಲಾಶಯದ ಹಿನ್ನೀರು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೪೯ (೨೨೦೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯ ಹಿಡಕಲ್ ಜಲಾಶಯದ ಹಿನ್ನೀರಿನಿಂದ ಕೋಟಬಾಗಿ ೩ನೇ ಹಂತದ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಸದರಿ ಯೋಜನೆಗಳಿಗೆ ಒಳಪಡುವ ಒಟ್ಟು ಗ್ರಾಮಗಳು ಎಷ್ಟು;

(ಇ) ಈ ಯೋಜನೆಗೆ ಒಳಪಡುವ ನೀರಾವರಿ ಕ್ಷೇತ್ರ ಎಷ್ಟು ;

(ಈ) ಹಾಗಿದ್ದಲ್ಲಿ, ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು ?

## ಅರಣ್ಯ ಪ್ರದೇಶದಲ್ಲಿ ದೊರೆಯುವ ಉಪ್ಪಾಗಿ ಉತ್ಪನ್ನ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೭೫೦ (೨೧೯೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಕೆಲ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ಉಪ್ಪಾಗಿ ಅಥವಾ ಉಪ್ಪಂಗಿಯ ಹಣ್ಣು ಮತ್ತು ಕಾಯಿಗಳನ್ನು ಸಂಗ್ರಹಿಸಿ ತಂದು ಬೆಂಕಿಯ ಶಾಖದಲ್ಲಿ ಒಣಗಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕಾಡು ಬೆಳೆಗೆ ಸರ್ಕಾರ ನೀಡಿರುವ ಮತ್ತು ಇದರ ವೈಜ್ಞಾನಿಕ ಹೆಸರೇನು ;

(ಆ) ಈ ಉಪ್ಪಾಗಿ (ಉಪ್ಪಂಗಿ) ಕಾಡು ಪದಾರ್ಥ ವೈಜ್ಞಾನಿಕವಾಗಿ ಬಳಕೆಯಾಗುತ್ತಿದೆಯೇ ಅಥವಾ ಆಹಾರ ಪದಾರ್ಥವಾಗಿ ಬಳಸಲಾಗುತ್ತಿದೆಯೇ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ (ವಿವರಿಸುವುದು) ;

(ಇ) ಈ ಬೆಳೆಯನ್ನು ನಮ್ಮ ರಾಜ್ಯದಲ್ಲಿಯೇ ಬಳಸಲಾಗುತ್ತಿದೆಯೇ ಅಥವಾ ಪರ ರಾಜ್ಯ ಮತ್ತು ಪರ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆಯೇ ; ಇದರ ಬಳಕೆಯ ವಿವರ ನೀಡುವುದು ;

(ಈ) ಈ ಅರಣ್ಯ ಬೆಳೆಯು ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ದೊರೆಯುತ್ತಿದೆ (ತಾಲ್ಲೂಕುವಾರು ವಿವರ ನೀಡುವುದು); ರಾಜ್ಯದಲ್ಲಿ ಎಷ್ಟು ಪ್ರಮಾಣದ ಬೆಳೆ ಸಿಗುತ್ತಿದೆ; ಇದರಿಂದ ಬೆಳೆಯ ಫಸಲು ಪಡೆಯುತ್ತಿರುವವರಿಗೆ ಸರ್ಕಾರದ ನಿರ್ದೇಶನವೇನು; ಉಪ್ಪಾಗಿ(ಉಪ್ಪಂಗಿ) ಬೆಳೆಯು ಸಂಗ್ರಹದಿಂದ ಸರ್ಕಾರಕ್ಕೆ ಆದಾಯವಿದೆಯೇ; ಇದಕ್ಕೆ ಸಂಬಂಧಿಸಿದಂತೆ ಅರಣ್ಯ ಸಂರಕ್ಷಕರ ನಿಲುವೇನು; ವಿಧಿಸಿರುವ ಮಾನದಂಡಗಳೇನು; ಇದರಿಂದಾಗುವ ಅರಣ್ಯ ನಾಶ ತಡೆಯಲು ಕ್ರಮ ಕೈಗೊಳ್ಳಲಾಗಿದೆಯೇ ;

(ಉ) ರಾಜ್ಯದಲ್ಲಿ ಈ ಬೆಳೆಯ ವಾರ್ಷಿಕ ವಹಿವಾಟು ಎಷ್ಟು; ಇದರ ಅನುಕೂಲ ಅನಾನುಕೂಲಗಳೇನು; ಇದೇ ತರಹ ಅರಣ್ಯದಲ್ಲಿ ಇನ್ನೂ ಯಾವ್ಯಾವ ಕಾಡು ಬೆಳೆಗಳನ್ನು ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿದೆ; ಹಾಗೂ ಯಾವ್ಯಾವ ಪ್ರದೇಶದಲ್ಲಿ ದೊರೆಯುತ್ತವೆ (ತಾಲ್ಲೂಕುವಾರು ವಿವರ ನೀಡುವುದು); ಇವುಗಳಿಗೆ ಸರ್ಕಾರ ಯಾವುದಾದರು ನಿಬಂಧನೆ ವಿಧಿಸಿದೆಯೇ; ಈ ಎಲ್ಲಾ ಪದಾರ್ಥಗಳ ಉಪಯೋಗ ಮತ್ತು ಯಾವ ಪ್ರದೇಶದಲ್ಲಿ ಉಪಯೋಗಿಸಲಾಗುತ್ತದೆ; ಇವುಗಳಿಂದ ವಾರ್ಷಿಕ ವಹಿವಾಟು

ಪ್ರಮಾಣವೆಷ್ಟು (ವಿವರ ತಿಳಿಸುವುದು) (ಉದಾ: ಅಳಲೆಕಾಯಿ, ಲವಂಗ, ದಾಲ್ಚಿನ್ನಿ, ಸೊರಗಿ ಮೊಕ್ಕೆ, ಮುರುಗಲು ಕಾಯಿ(ಕೋಕಮ್), ಜೇನು ತುಪ್ಪ, ರಾಮಪತ್ರೆ, ಓಟೆ ಹುಳಿ, ಇತ್ಯಾದಿ) ;

## ನಾಡ ಕಛೇರಿಯ ಸಿಬ್ಬಂದಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ **ಚುನಾಯಿತರಾದವರು**) :-

೧೭೫೧ (೨೧೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ನಾಡ ಕಛೇರಿಯ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) ;

(ಆ) ನಾಡ ಕಛೇರಿಯ ಕಾರ್ಯ ಉದ್ದೇಶವೇನು (ವಿವರ ನೀಡುವುದು)

(ಇ) ರಾಜ್ಯಾದ್ಯಂತ ನಾಡ ಕಛೇರಿಗಳಿಗೆ ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಈ) ನಾಡ ಕಛೇರಿಗಳನ್ನು ಮೇಲ್ದರ್ಜೆಗೇರಿಸಿ ಹೆಚ್ಚು ಅಧಿಕಾರ ನೀಡಿ, ಅಧಿಕಾರ ವಿಕೇಂದ್ರಿಕರಣಗೊಳಿಸಬೇಕೆಂಬ ಸರ್ಕಾರದ ನಿಲುವಿನಂತೆ ಯಾವಾಗ ನಾಡ ಕಛೇರಿ ಮೇಲ್ದರ್ಜೆಗೇರಿಸಲಾಗುವುದು (ವಿವರ ನೀಡುವುದು) ?

## ಗ್ರಾಮ ಕರಣಿಕರ ಜವಾಬ್ದಾರಿಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೫೨ (೨೧೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಕರಣಿಕರ ಒಟ್ಟು ಸಂಖ್ಯೆ ಎಷ್ಟು ;

(ಆ) ಗ್ರಾಮ ಕರಣಿಕರ ಜವಾಬ್ದಾರಿ ಮತ್ತು ಕರ್ತವ್ಯಗಳೇನು ;

(ಇ) ಪ್ರತಿ ಗ್ರಾಮ ಪಂಚಾಯತ್‌ಗೆ ಒಟ್ಟು ಗ್ರಾಮಕರಣಿಕರಿರಬೇಕಾಗಿದ್ದು ಪ್ರಸ್ತುತ ಪಂಚಾಯತ್‌ಗೆ ಒಬ್ಬರಂತೆ ಗ್ರಾಮ ಕರಣಿಕರಿರುವರೆ ;

(ಈ) ಹಾಗಿಲ್ಲವಾದರೆ ಪ್ರತಿ ಗ್ರಾಮ ಪಂಚಾಯತ್‌ಗೆ ಒಬ್ಬ ಗ್ರಾಮಕರಣಿಕರನ್ನು ನಿಯೋಜಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಗ್ರಾಮ ಮಟ್ಟದಲ್ಲಿ ಕಡ್ಡಾಯ ನೋಂದಣಿ ಅಧಿಕಾರಿಗಳ ನೇಮಕಾತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೫೩ (೨೧೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮ ಮಟ್ಟದಲ್ಲಿ ಭಾಗ್ಯಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಕಡ್ಡಾಯ ವಿವಾಹ ನೋಂದಣಿಯ ಹೆಸರಿಸಲಾದ ಅಧಿಕಾರಿ ಯಾರು ;

(ಆ) ನೇಮಕವಾಗಿದ್ದರೆ, ರಾಜ್ಯದ ಯಾವ ಗ್ರಾಮದಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗಿದೆ ಮತ್ತು ಎಷ್ಟು ದಿನಗಳ ಕಾಲಮಿತಿಯಲ್ಲಿ ಈ ಸೇವೆಯನ್ನು ನೀಡಲಾಗುವುದು ;

(ಇ) ಈ ಸೇವೆಯನ್ನು ಸಕಾಲ ಸೇವೆಯೊಳಗೆ ಸೇರ್ಪಡೆ ಮಾಡಲು ಸರ್ಕಾರ ಚಿಂತನೆಯನ್ನು ನಡೆಸಲಾಗಿದೆಯೇ ;

(ಈ) ನಡೆಸಿದ್ದಲ್ಲಿ ಯಾವ ಹಂತದಲ್ಲಿದೆ ?

## ಹಂಗಾರ ಕಟ್ಟೆ-ಕೋಡಿಯ ಮಧ್ಯೆ ತುಂಬಿರುವ ಹೂಳನ್ನು ತೆಗೆಯದಿರುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೫೪ (೨೧೭೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆ ಮತ್ತು ತಾಲ್ಲೂಕಿನ ಕೋಡಿಯಲ್ಲಿರುವ ಜಟ್ಟೆ (ಬಂದರು) ಯನ್ನು ನವೀಕರಿಸಿದ್ದು, ಸದರಿ ಬಂದರಿನಲ್ಲಿ ೧೦೦೦ ದೋಣಿಗಳ ನಿಲುಗಡೆಗೆ ಅವಕಾಶವಿದ್ದು, ದಾರಿ ಮಧ್ಯದಲ್ಲಿ ಹಂಗಾರ ಕಟ್ಟೆಯಿಂದ-ಕೋಡಿಯವರೆಗೆ ಹೂಳು ತುಂಬಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಹಂಗಾರ ಕಟ್ಟೆಯಿಂದ-ಕೋಡಿಯ ದಾರಿಯಲ್ಲಿ ತುಂಬಿದ ಹೂಳನ್ನು ತೆಗೆಯದಿರಲು ಕಾರಣವೇನು ;

(ಇ) ಹಾಗಿದ್ದರೆ ಹೂಳನ್ನು ತೆಗೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಪೂರ್ಣ ವಿವರ ನೀಡುವುದು) ?

## ಮಳೆ ಗಾಳಿಗೆ ಮರಗಳು ಉರುಳುತ್ತಿರುವುದು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೭೫೫ (೨೧೯೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩ ರಿಂದ ಇಲ್ಲಿಯವರೆಗೆ ರಾಜ್ಯಾದ್ಯಂತ ಮಳೆ, ಗಾಳಿಗೆ ಉರುಳಿದ ಮರಗಳ ಸಂಖ್ಯೆ ಎಷ್ಟು ;

(ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಮರಗಳ ಸಂಖ್ಯೆ ಎಷ್ಟು; ಇಲ್ಲಿ ಮಳೆ ಗಾಳಿಗೆ ಉರುಳಿದ ಮರಗಳ ಸಂಖ್ಯೆ ಎಷ್ಟು ;

(ಇ) ಮಳೆ, ಗಾಳಿಗೆ ಮರಗಳು ಉರುಳುತ್ತಿದ್ದರೆ ಮರಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಹಾಗಾಗಿ ಮರಗಳು ಉರುಳಿದಂತೆ, ಬದಲಿ ಗಿಡಗಳನ್ನು ನೆಡುವ ಕಾರ್ಯವನ್ನೇನಾದರು ಸರ್ಕಾರ ಕೈಗೊಂಡಿದೆಯೇ ; ಕೈಗೊಂಡಿದ್ದರೆ, ಬದಲಿ ಗಿಡಗಳನ್ನು ಎಲ್ಲಿ ಎಲ್ಲಿ ನೆಡಲಾಗುತ್ತದೆ ;

(ಈ) ಬದಲಿ ಗಿಡಗಳನ್ನು ನೆಟ್ಟಿದ್ದರೆ, ಗಿಡಗಳ ಪೋಷಣೆಯನ್ನು ಯಾವ ರೀತಿ ಮಾಡಲಾಗುತ್ತಿದೆ ;

(ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿದಿರುವ ಪ್ರಕರಣಗಳು ದಾಖಲಾಗಿವೆಯೇ; ಎಷ್ಟು ಪ್ರಕರಣಗಳು ದಾಖಲಾಗಿವೆ ?

## ವನ್ಯ ಜೀವಿಗಳಿಂದ ಜಮೀನಿನ ಬೆಳೆಗಾಗಿ ರಾತ್ರಿ ಕಾವಲು ಕಾಯುವ ರೈತನ ಸಾವು

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೭೫೬ (೨೧೪೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾಡುಪ್ರಾಣಿಗಳು ಎಲ್ಲಿ ಜಮೀನಿಗೆ ನುಗ್ಗಿ ಬೆಳೆ ನಾಶ ಮಾಡಿ ಬಿಡುತ್ತವೋ ಎಂದು ರೈತ ರಾತ್ರಿ ವೇಳೆ ಮರದ ಮೇಲೊಂದು ಅಟ್ಟಣೆ ನಿರ್ಮಿಸಿ, ಮಳೆ ಬಂದರೂ, ಗುಡುಗಿದರೂ, ಚಳಿ ಇದ್ದರೂ ಕೂಡ ನಿದ್ದೆಗೆಟ್ಟು ಮರದ ಮೇಲೆ ಕುಳಿತು ಕಾವಲು ಕಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ರೈತ ರಾತ್ರಿ ಕಾವಲು ಕಾಯುವುದಕ್ಕೆ ಮುಕ್ತಿ ತರಲು ಸರ್ಕಾರ ಕೈಗೊಂಡ ಕ್ರಮವೇನು ;

(ಆ) ೨೦೧೦ ರಿಂದ ಇಲ್ಲಿಯವರೆಗೆ ಮೈಸೂರು ಜಿಲ್ಲೆಯಲ್ಲಿರುವ ಎಲ್ಲಾ ಅರಣ್ಯಗಳ ಆನೆ ಹಾಗೂ ಇನ್ನಿತರ ಪ್ರಾಣಿಗಳ ಹಾವಳಿಗೆ ಸಿಲುಕಿ ಮೃತಪಟ್ಟಿದ್ದಾರೆಯೇ; ಹಾಗಿದ್ದರೆ, ಎಷ್ಟು ಮಂದಿ ಮೃತರಾಗಿದ್ದಾರೆ (ವಲಯವಾರು ಮೃತಪಟ್ಟವರ ವಿವರ ಹಾಗೂ ಘಟನೆಯನ್ನು ವಿವರಿಸುವುದು) ;

(ಇ) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಹೊಸಬಿರ್‍ವಾಳು ಬಳಿ ಇರುವ ನುಗು ವನ್ಯಧಾಮ ಅರಣ್ಯ ವಲಯದಲ್ಲಿ ನೂತನವಾಗಿ ಹಮ್ಮಿಕೊಂಡಿರುವ ಯೋಜನೆಗಳು ಯಾವುವು; ಯಾವಾಗ ಪ್ರಾರಂಭಿಸಲಾಗಿದೆ ; ಪ್ರಸ್ತುತ ನಿಯೋಜನೆಯಲ್ಲಿರುವ ವಲಯ ಅರಣ್ಯಾಧಿಕಾರಿ ಯಾರು ;

(ಈ) ನುಗು ವನ್ಯಧಾಮ ಅರಣ್ಯ ವಲಯಲ್ಲಿ ಟ್ರಂಚ್(Elephant trunch)ನಿರ್ಮಿಸಲಾಗುತ್ತಿದೆಯೇ; ಹಾಗಿದ್ದರೆ, ಟ್ರಂಚ್‌ನ ಆಳವೆಷ್ಟಿರುತ್ತದೆ; ಪ್ರಸ್ತುತ ಯಾವ ಹಂತದಲ್ಲಿದೆ ; ಈ ಕಾಮಗಾರಿ ಯಾವಾಗ ಮುಕ್ತಾಯವಾಗುತ್ತದೆ ;

(ಉ) ಮೇಲಿನ ವನ್ಯಧಾಮ ಅರಣ್ಯ ವಲಯದಲ್ಲಿ ಜನವರಿ, ೨೦೧೪ ರಿಂದ ಇಲ್ಲಿಯವರೆಗೆ ಯಾವ ಬೆಳಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ (ರೈತನ ಹೆಸರು ಮತ್ತು ಆತನ ಗ್ರಾಮವನ್ನು ತಿಳಿಸುವುದು) ?

## ದಾಂಡೇಲಿಯ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ಕಾರ್ಮಿಕರು

**ಶ್ರೀ ಡಿ.ಎಸ್.ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೭೫೭ (೨೦೪೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ದಿ॥ ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ಸಂಘಗಳು ಯಾವುವು ;

(ಆ) ಕಳೆದ ಹದಿನೈದು ವರ್ಷಗಳಲ್ಲಿ ಯಾವ ಕಾರ್ಮಿಕ ನಾಯಕರು ಕಾರ್ಮಿಕರನ್ನು ಪ್ರತಿನಿಧಿಸಿರುತ್ತಾರೆ; ಅವರು ಪ್ರತಿನಿಧಿಸುತ್ತಿರುವ ಕಾರ್ಮಿಕ ಸಂಘಟನೆಗಳು ಯಾವುವು ;

(ಇ) ಕಾರ್ಮಿಕ ಸಂಘದ ಅಧಿಕೃತ ನಾಯಕರಾಗಿ ತ್ರಿಪಕ್ಷೀಯ ಒಪ್ಪಂದದಲ್ಲಿ ಭಾಗವಹಿಸುತ್ತಿರುವ ಪ್ರತಿಯೊಂದು ಕಾರ್ಮಿಕ ನಾಯಕರು ಯಾರ್ಯಾರು (ಹೆಸರು, ವಿಳಾಸ, ವಯಸ್ಸು, ಶಿಕ್ಷಣ ಹಾಗೂ ಕೆಲಸ ಮಾಡುತ್ತಿರುವ ವಿಭಾಗಗಳ ಹೆಸರು ತಿಳಿಸುವುದು)?

## ಅರಣ್ಯ ಪ್ರದೇಶದ ಒತ್ತುವರಿ

**ಶ್ರೀ ಬಿ.ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):-**

೧೭೫೮ (೨೧೪೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಈ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಒತ್ತುವರಿ ಮಾಡಿರುವ ವಿಸ್ತೀರ್ಣ ಎಷ್ಟು ;

(ಇ) ಅರಣ್ಯ ಪ್ರದೇಶದ ಒತ್ತುವರಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03398/1000 ಪ್ರತಿಗಳು/25-07-2014